4) ಪ್ರತಿಯೊಬ್ಬ ಟೆಂಡರ್‌ದಾರರು: ಸವಾಲುದಾರರು ವಾಹನವೊಂದಕ್ಕೆ ರೂ. 1000-00 (ಒಂದು ಸಾವಿರ ರೂಪಾಯಿಗಳು) ಠೇವಣಿ ಹಣವನ್ನು ನಗದು ರೂಪದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು, ಬೆಂಗಳೂರು ಕಛೇರಿಯಲ್ಲಿ ಪಾವತಿಸಿ, ರಶೀತಿ ಪಡೆದು ರಶೀತಿಯನ್ನು ಅರ್ಜಿಯ ಜೊತೆ ನೀಡತಕ್ಕದ್ದು. ಠೇವಣಿ ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು ಹಾಗೂ ಠೇವಣಿಗೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

5) ಟೆಂಡರ್ ಫಾರಂನಲ್ಲಿ ಅತೀ ಹೆಚ್ಚಿನ ಹಣವನ್ನು ಅಂಕಿ ಹಾಗೂ ಅಕ್ಷರಗಳೆರಡರಲ್ಲಿಯೂ ಬರೆದಿರಬೇಕು. ಟೆಂಡರ್ ಫಾರಂನಲ್ಲಿ ಬೆಲೆಯನ್ನು ಬರೆಯುವಾಗ ಏನಾದರೂ ತಿದ್ದುಪಡಿ ಮಾಡಿದ್ದರೆ ಆ ಸ್ಥಳದಲ್ಲಿ ಟೆಂಡರ್‌ದಾರರು ಪೂರ್ಣ ಸಹಿ ಮಾಡತಕ್ಕದ್ದು.

6) ಟೆಂಡರ್ ಫಾರಂನ್ನು ವರ್ಗಾವಣೆ ಮಾಡಲಾಗುವುದಿಲ್ಲ.

7) ಟೆಂಡರ್ ಯಾವುದೇ ಷರತ್ತು ಹೊಂದಿರತಕ್ಕದ್ದಲ್ಲ ಮತ್ತು ಷರತ್ತು ಹೊಂದಿದ್ದರೆ ಅವುಗಳನ್ನು ತಿರಸ್ಕರಿಸಲಾಗುವುದು.

8) ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 20.12.2004ರ ಸಂಜೆ 4-00 ಗಂಟೆಯವರೆಗೆ ಸ್ವೀಕರಿಸಲಾಗುವುದು ನಂತರ ಬಂದ ಟೆಂಡರ್ ಫಾರಂಗಳನ್ನು ತಿರಸ್ಕರಿಸಲಾಗುವುದು.

9) ಟೆಂಡರ್‌ದಾರರು ಸಹ ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಠೇವಣಿ ಹಣವಿಲ್ಲದೆ ಭಾಗವಹಿಸಬಹುದು. ಠೇವಣಿ ತುಂಬಿದ ಠೇವಣಿದಾರರನ್ನು ಹೊರತುಪಡಿಸಿ, ಸವಾಲುದಾರರು ಹರಾಜು ಮಾಡಲ್ಪಡುವ ಪ್ರತಿ ವಾಹನಕ್ಕೆ ರೂ.1000-00 ಠೇವಣಿಯನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು.

10) ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು, ಬೆಂಗಳೂರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಬಹಿರಂಗ ಹರಾಜು ನಡೆಸುವವರು ಠೇವಣಿ ತುಂಬಿದ ಟೆಂಡರ್‌ದಾರರಿಗೆ ಸವಾಲುದಾರರಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

11) ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬೆಲೆ (ಹಣವನ್ನು) ದಾಖಲುಗೊಳಿಸಿದ ನಂತರ ಸ್ವೀಕೃತವಾದ ಟೆಂಡರ್‌ಗಳನ್ನು ಕ್ರಮ ಸಂಖ್ಯೆ: 10ರಲ್ಲಿನ ಅಧಿಕಾರಿಗಳು ಸಾರ್ವಜನಿಕ ಸಮಕ್ಷಮ ತೆರೆದು ಬಹಿರಂಗಪಡಿಸುವರು. ಈ ಎರಡರಲ್ಲಿ ಅತೀ ಹೆಚ್ಚಿನ ಹಣವನ್ನು ಯಾರು ನಮೂದಿಸಿರುವರೋ ಅವರನ್ನು ಯಶಸ್ವಿ ಟೆಂಡರ್: ಬಹಿರಂಗ ಸವಾಲುದಾರರೆಂದು ಪರಿಗಣಿಸಲಾಗುವುದು. ಮೊದಲ ಬಹಿರಂಗ ಹರಾಜು ನಡೆಸಿದ ನಂತರ ಟೆಂಡರ್‌ಗಳನ್ನು ಪರಿಗಣಿಸಲಾಗುವುದು.

12) ಮೇಲೆ ತಿಳಿಸಿದ ವಾಹನಗಳು ಸ್ಕ್ರಾಪ್ಡ್ ಕಂಡಿಷನ್‌ನಲ್ಲಿ ಇರುವುದಾಗಿ ಮೋಟಾರ್ ವಾಹನ ಪರಿವೀಕ್ಷಕರು ಈಗಾಗಲೇ ವರದಿ ಮಾಡಿರುವುದರಿಂದ ಯಶಸ್ವಿ ಟೆಂಡರ್: ಸವಾಲುದಾರರಿಗೆ ವಾಹನದ ಮಾಲೀಕತ್ವವನ್ನು ವರ್ಗಾವಣೆ ಮಾಡಲಾಗುವುದಿಲ್ಲ ಹಾಗೂ ಯಶಸ್ವಿ ಟೆಂಡರ್: ಸವಾಲುದಾರರು ಸದರಿ ವಾಹನವನ್ನು ಯಥಾ ಸ್ಥಿತಿಯಲ್ಲಿ ತಮ್ಮ ವಶಕ್ಕೆ ಪಡೆದುಕೊಳ್ಳಬೇಕು.

13) ಮೊದಲನೇ ಅತೀ ಹೆಚ್ಚಿನ ಅಂತಿಮ ಬಹಿರಂಗ ಹರಾಜು-ಕಂ-ಟೆಂಡರ್‌ದಾರರು ಪೂರ್ಣ ಹಣವನ್ನು ಪಾವತಿಸಿದ ನಂತರವೇ ಎರಡನೇ ಅತೀ ಹೆಚ್ಚಿನ ಅಂತಿಮ ಬಹಿರಂಗ ಹರಾಜು-ಕಂ-ಟೆಂಡರ್‌ದಾರರ ಹಣವನ್ನು ವಾಪಸ್ಸು ಮಾಡಲಾಗುವುದು. ಒಂದು ವೇಳೆ ಮೊದಲನೇ ಅತೀ ಹೆಚ್ಚಿನ ಅಂತಿಮ ಬಹಿರಂಗಹರಾಜು-ಕಂ-ಟೆಂಡರ್‌ದಾರರು ಪೂರ್ಣ ಹಣ ಪಾವತಿಸದೆ ಇದ್ದಲ್ಲಿ ಅದೇ ದಿನ ಎರಡನೇ ಬಿಡ್ಡುದಾರರು ಆರ್‌ಟಿಓ ರವರು ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿಗೆ ಬಹಿರಂಗ ಹರಾಜು ಮತ್ತು ಟೆಂಡರ್ ಇದ್ದಲ್ಲಿ ಎರಡನೇ ಬಿಡ್‌ದಾರರಿಗೆ ನೀಡಲಾಗುವುದು.

14) ಅತಿ ಹೆಚ್ಚಿನ ಮೊತ್ತಕ್ಕೆ ಕೇಳುವ ಟೆಂಡರ್‌ದಾರರ: ಸವಾಲುದಾರರು ಒಪ್ಪಿಕೊಂಡ ನಂತರ ನಿರಾಕರಿಸಿದರೆ ಅವರು ತುಂಬಿದ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೆ ಮೊತ್ತೊಮ್ಮೆ ಹೊಸದಾಗಿ ಅಧಿಸೂಚನೆಯನ್ನು ಹೊರಡಿಸಿ ಬಹಿರಂಗ ಹರಾಜು ಮಾಡಲಾಗುವುದು. ಯಶಸ್ವಿ ಟೆಂಡರ್: ಸವಾಲುದಾರರು ನಿಯಮಗಳಂತೆ ಅನ್ವಯವಾಗುವ ಕರ್ನಾಟಕ ಮಾರಾಟ ತೆರಿಗೆ ಮತ್ತು ಇತರೆ ತೆರಿಗೆಗಳನ್ನು ಪ್ರತ್ಯೇಕವಾಗಿ ಭರಿಸಬೇಕಾಗುತ್ತದೆ.

15) ಯಶಸ್ವಿ ಬಿಡ್‌ದಾರರು ಸಂಪೂರ್ಣ ಹಣವನ್ನು ನಗದು ರೂಪದಲ್ಲಾಗಲಿ, ಅಥವಾ ಡಿಡಿ ಮೂಲಕವಾಗಲಿ ತುಂಬಿ ರಶೀದಿ ಪಡೆಯಬಹುದು.

16) ಹರಾಜು ಮುಗಿದ ನಂತರ ಯಶಸ್ವಿಯಾಗದ ಟೆಂಡರ್‌ದಾರರಿಗೆ: ಸವಾಲುದಾರರಿಗೆ ಠೇವಣಿ ಹಣವನ್ನು ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು.

17) ಹರಾಜು ಮಾಡುವ ವೇಳೆಯಲ್ಲಿ ಏನಾದರೂ ತಕರಾರುಗಳು ಬಂದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು, ಬೆಂಗಳೂರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಕೈಗೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

18) ಸವಾಲನ್ನು: ಟೆಂಡರ್‌ನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ಅಂಗೀಕರಿಸುವ ಅಥವಾ ಮುಂದೂಡುವ ಅಧಿಕಾರವನ್ನು ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು ಬೆಂಗಳೂರು ರವರು ಹೊಂದಿರುತ್ತಾರೆ.

19) ಇಚ್ಛೆಯುಳ್ಳವರು ಹರಾಜು ಮಾಡಲ್ಪಡುವ ಈ ನಿರುಪಯುಕ್ತ ವಾಹನಗಳನ್ನು ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು, ಬೆಂಗಳೂರು ರವರ ಕಛೇರಿಯ ಆವರಣದಲ್ಲಿ ನಿಲ್ಲಿಸಲಾಗಿದ್ದು ಕಛೇರಿಯ ವೇಳೆಯಲ್ಲಿ ಆಗಮಿಸಿ ನೋಡಬಹುದು.

ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶಕರು
ಕರ್ನಾಟಕದಲ್ಲಿ, ಬೆಂಗಳೂರು.

ಪಿ.ಆರ್.486

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ಅಧಿಸೂಚನೆ

ಸಂಖ್ಯೆ: ಬಿ3-ಶ್ರೀಗಂಧ-ಸಿಆರ್-19:2004-05, ಬೆಂಗಳೂರು, ದಿನಾಂಕ: 18ನೇ ಅಕ್ಟೋಬರ್, 2004

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸರ್ಕಾರಿ ಶ್ರೀಗಂಧ ಉಗ್ರಾಣ ಶಿವಮೊಗ್ಗದಲ್ಲಿ ಕೆಳಕಂಡ ಶ್ರೀಗಂಧ ಬಿಳಿಚಕ್ಕೆ ಮತ್ತು ಶ್ರೀಗಂಧದ ಪುಡಿಯನ್ನು ದಿನಾಂಕ: 22.11.2004 ರಂದು ಬೆಳಿಗ್ಗೆ 11.00 ಗಂಟೆಗೆ ಸಾರ್ವಜನಿಕ ಬಹಿರಂಗ ಹರಾಜನ್ನು ಮಾಡಲಾಗುವುದು.

ಕ್ರ.ಸಂ.	ಶ್ರೀಗಂಧದ ವರ್ಗೀಕರಣ	ಪ್ರಮಾಣ (ಟನ್ನುಗಳಲ್ಲಿ)
1.	ರೂಟ್ I	4.000
2.	ರೂಟ್ II	6.000
3.	ರೂಟ್ III	6.000
4.	ಜಾಜ್‌ಪೋಕಲ್ I	1.000
5.	ಜಾಜ್ ಪೋಕಲ್ II	1.000
6.	ಗಟಬದಲ	0.500
7.	ಬಾಗಾರದಾದ್	1.000
8.	ಐನ್‌ಬಗಾರ್	0.500
9.	ಐನ್‌ಚಿಲ್ಟ	5.000
10.	ಚೆರಿಯಾ	4.000
11.	ಬಸಲ ಬುಕಣಿ	1.000
12.	ಮಿಲ್ವಚಿಲ್ಟಾ	30.000
13.	ಸಾಡಸ್ಟ್	0.150
14.	ವೈಟ್‌ಚಿಪ್ಸ್	80.000

ವಿವರಗಳನ್ನು ಸರ್ಕಾರಿ ಶ್ರೀಗಂಧದ ಕೋಠಿ ಅಧಿಕಾರಿಗಳಿಂದ ಪಡೆಯಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಪಿ.ಆರ್.487

ಕರ್ನಾಟಕ ಲೋಕ ಸೇವಾ ಆಯೋಗ

ಲೋಕ ಸೇವಾ ಆಯೋಗದ ಕಛೇರಿ, "ಪಾರ್ಕ್ ಹೌಸ್", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಆರ್(2) 903/2004-05/ ಪಿಎಸ್‌ಸಿ, ಬೆಂಗಳೂರು, ದಿನಾಂಕ: 18ನೇ ಅಕ್ಟೋಬರ್, 2004

ಕರ್ನಾಟಕ ಲೋಕ ಸೇವಾ ಆಯೋಗದ ಆದೇಶ ಸಂಖ್ಯೆ: ಆರ್(2) 853/04-05 ಪಿಎಸ್‌ಸಿ ದಿನಾಂಕ:15.09.2004ರ ಆದೇಶದ ಭಾಗದಲ್ಲಿನ ಕೋಷ್ಟಕದಲ್ಲಿ ಕ್ರಮ ಸಂಖ್ಯೆ 3ರ ಎದುರು ಇರುವ ನೋಂದಣಿ ಸಂಖ್ಯೆ 8037ರ ಬದಲಾಗಿ ನೋಂದಣಿ ಸಂಖ್ಯೆ 3082 ಎಂದು ಹಾಗೂ ಕ್ರಮ ಸಂಖ್ಯೆ 4ರ ಎದುರು ಇರುವ ನೋಂದಣಿ ಸಂಖ್ಯೆ 3082ರ ಬದಲಾಗಿ ನೋಂದಣಿ ಸಂಖ್ಯೆ 8037 ಎಂದು ಓದಿಕೊಳ್ಳುವುದು.

ಬಿ.ಎಸ್. ರಾಮಪ್ರಸಾದ್
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ಪಿ.ಆರ್.488

ಉಪ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿ

ಮರು ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ: ಜಿಕೃತಕೇ:ವಾಹನ : ವಿಲೆ: 2003-04, ದಿನಾಂಕ: 11ನೇ ಅಕ್ಟೋಬರ್, 2004

ವಿಷಯ : ಈ ಕಛೇರಿಯ ಮೆಟಡೋರ್ ಮಿನಿಬಸ್ ವಾಹನ ಸಂಖ್ಯೆ ಎಂಇಎಕ್ಸ್ 6476ನ್ನು ಟೆಂಡರ್ ಕಂ ಬಹಿರಂಗ ಹರಾಜು ಮಾಡಲು ಪ್ರಕಟಣೆ.

1. ಈ ಕೆಳಗೆ ನಮೂದಿಸಿರುವ ಮೆಟಡೋರ್ ವಾಹನ ಸಂಖ್ಯೆ: ಎಂಇಎಕ್ಸ್ 6476 ನ್ನು ನಿಯಮಾನುಸಾರ ಉಪ ಕೃಷಿ ನಿರ್ದೇಶಕರು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಬೆಳ್ತಂಗಡಿ ದ.ಕ. ಜಿಲ್ಲೆ ಅಥವಾ ಅವರಿಂದ ಪ್ರಾಧಿಕಾರ ಪಡೆದ ಪ್ರತಿನಿಧಿಯಿಂದ ದಿನಾಂಕ: 15.12.2004ರಂದು ಬೆಳಿಗ್ಗೆ 11-00 ಗಂಟೆಯ ನಂತರ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಅಧಿಸೂಚಿಸಲಾಗಿದೆ. ಅವಶ್ಯವಿದ್ದಲ್ಲಿ ಹರಾಜನ್ನು ಮುಂದಿನ ಕೆಲಸದ ದಿನದಂದು ಕೂಡಾ ಮುಂದುವರಿಸಲಾಗುವುದು.

2. ಪ್ರತಿಯೊಬ್ಬ ಖರೀದಿದಾರನು ತನ್ನ ಹೆಸರು ಮತ್ತು ಪೂರ್ಣ ವಿಳಾಸವನ್ನು ನೀಡಿ ಹರಾಜಿಗೆ ಮೊದಲು ಪ್ರತ್ಯೇಕ ಮುಂಗಡವಾಗಿ ರೂ. 1000-00 ಮಾತ್ರ ಮೊತ್ತವನ್ನು ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿ ಇವರ ಹೆಸರಿನಲ್ಲಿ ಪಡೆದಿರುವ ಡಿಮ್ಯಾಂಡ್ ಡ್ರಾಫ್ಟ್‌ನ್ನು ಅಥವಾ ನಗದು ರೂಪದಲ್ಲಿ ನಗದು ವಿಭಾಗದಲ್ಲಿ ಠೇವಣಿ ಇಡಬೇಕು. ಅವಿಜೇತ ಖರೀದಿದಾರರಿಗೆ ಹರಾಜು ಮುಗಿದ ಕೂಡಲೇ ಈ ಠೇವಣಿಯನ್ನು ಹಿಂದಿರುಗಿಸಲಾಗುವುದು. ಈ ಸಂಬಂಧದಲ್ಲಿ ಯಾವುದೇ ಚೆಕ್ಕನ್ನು ಅಂಗೀಕರಿಸುವುದಿಲ್ಲ. ಮುಂಗಡ ಹಣದ ಮೊಬಲಗನ್ನು ಈ ಕಛೇರಿಯ ನಗದು ವಿಭಾಗದಲ್ಲಿ ದಿನಾಂಕ 15.12.04 ರಂದು ಹರಾಜು ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮುಂಚಿತವಾಗಿ ಪಾವತಿ ಮಾಡಿ ಸ್ವೀಕೃತಿ ಪಡೆದು ಹರಾಜಿನಲ್ಲಿ ಭಾಗವಹಿಸುವುದು.

3. ಯಶಸ್ವಿ ಬಿಡ್‌ದಾರನು ಅವರ ಹೊಣೆಯಲ್ಲಿ ಜಿಲ್ಲಾಧಿಕಾರಿ, ದ.ಕ. ಮಂಗಳೂರು ಇವರಿಂದ ಹರಾಜು ಅನುಮೋದಿತವಾದ ಒಂದು ವಾರದೊಳಗಾಗಿ ವಾಹನವನ್ನು ಕೊಂಡೊಯ್ಯಬೇಕು. ತಪ್ಪಿದಲ್ಲಿ ಮುಂಗಡ ಹಾಗೂ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್‌ದಾರರು ಒಟ್ಟು ಬಿಲ್ಲು ಶೇಕಡ 25 ಹಣವನ್ನು ತಕ್ಷಣ ಹಾಗೂ ಶೇಕಡಾ 75 ಹಣವನ್ನು ಅನುಮೋದನೆ ಆದ ಬಳಿಕ ಪಾವತಿಸತಕ್ಕದ್ದು.

4. ಹರಾಜು ಕೂಗುವುದಕ್ಕೆ ಮೊದಲು ಪ್ರತಿಯೊಬ್ಬ ಖರೀದಿದಾರನೂ ಈ ಹರಾಜಿನ ಷರತ್ತುಗಳನ್ನು ತಿಳಿದುಕೊಂಡಿರುವುದು ಮತ್ತು ಅರ್ಥ ಮಾಡಿಕೊಂಡಿರುವುದು ಅವಶ್ಯಕವಾಗಿರುತ್ತದೆ. ಷರತ್ತುಗಳನ್ನು ತಿಳಿದಿಲ್ಲವೆಂಬ, ತಪ್ಪಾಗಿ ಅರ್ಥ ಮಾಡಿಕೊಂಡಿರುವ ಅಥವಾ ಅಜ್ಞಾನದ ವಾದವನ್ನು ಅಂಗೀಕರಿಸುವುದಿಲ್ಲ.

5. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಬಿಡ್‌ನ್ನು ಅದಕ್ಕೆ ಯಾವುದೇ ಕಾರಣ ಕೊಡದೇ ಒಪ್ಪಿಕೊಳ್ಳಬಹುದು. ಅಥವಾ ನಿರಾಕರಿಸಬಹುದು. ಈ ವಿಚಾರದಲ್ಲಿ ಈ ಇಲಾಖಾ ಅಧಿಕಾರಿಗಳದೇ ಅಂತಿಮ ತೀರ್ಮಾನವಾಗಿರುತ್ತದೆ.

6. ಹರಾಜಿನ ಕ್ರಮವನ್ನು ರೂ.100 (ರೂಪಾಯಿ ಒಂದು ನೂರು ಮಾತ್ರ) ಏರಿಕೆ ಕ್ರಮದಲ್ಲಿ ಕೂಗಬೇಕು.

7. ಯಾವುದೇ ವಿವಾದ ಉಂಟಾದಲ್ಲಿ ಹರಾಜಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಈ ಕೆಳಗೆ ಸಹಿ ಮಾಡಿದವರ ನಿರ್ಣಯವೇ ಅಂತಿಮವಾಗಿರತಕ್ಕದ್ದು ಮತ್ತು ಕಾನೂನು ಪ್ರಕಾರ ಬದ್ಧವಾಗಿರತಕ್ಕದ್ದು. ಹರಾಜಿಗೆ ಉದ್ದೇಶಿಸಲಾಗಿರುವ ವಾಹನವನ್ನು ಹರಾಜು ಪ್ರಾರಂಭವಾಗುವುದಕ್ಕೆ ಒಂದು ವಾರ ಮುಂಚಿತವಾಗಿ ಬೆಳ್ತಂಗಡಿ ಬೀಜೋತ್ಪಾದನಾ ಕೇಂದ್ರದ ವಠಾರದಲ್ಲಿ ಪರಿವೀಕ್ಷಣೆಗೆ ಒದಗಿಸಲಾಗುವುದು.

8. ಯಾವುದೇ ಹೆಚ್ಚಿನ ವಿವರಗಳನ್ನು ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬೆಳ್ತಂಗಡಿ ಇವರ ಕಛೇರಿ ಕೆಲಸದ ದಿನಗಳಂದು ಕಛೇರಿಯ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದು.

9. ಬಿಡ್‌ದಾರರು: ಟೆಂಡರ್‌ದಾರರು ರೂ.1000-00ಗಳ ಇಎಂಡಿಯನ್ನೊಳಗೊಂಡಂತೆ ದಿನಾಂಕ 15.12.04 ರಂದು ಪೂರ್ವಾಹ್ನ ಹತ್ತು ಗಂಟೆಯೊಳಗಾಗಿ ಸೀಲ್ ಮಾಡಿದ ಟೆಂಡರುಗಳನ್ನು ಈ ಕಛೇರಿಗೆ ತಲುಪುವಂತೆ ಸಲ್ಲಿಸಬೇಕು. ಅದರ ನಂತರ ಸಲ್ಲಿಸಲಾದ ಬಿಡ್ ಟೆಂಡರ್‌ಗಳನ್ನು ಮತ್ತು ಇಎಂಡಿ ಇಲ್ಲದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ. ಸದರಿ ಬಿಡ್: ಟೆಂಡರ್‌ದಾರರು ಇಎಂಡಿ ನೀಡಿರುವ ಬಗ್ಗೆ ಹರಾಜು ದರ ಅಥವಾ ಟೆಂಡರು ದರ ಯಾವುದು ಹೆಚ್ಚೋ ಆ ದರವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

10. ಯಶಸ್ವಿ ಬಿಡ್‌ದಾರರು: ಟೆಂಡರ್‌ದಾರರು ವಾಹನದ ಮೌಲ್ಯದೊಂದಿಗೆ ಸರ್ಕಾರಿ ನಿಯಮಾವಳಿಯಂತೆ ಮಾರಾಟ ತೆರಿಗೆ ಪಾವತಿಸಬೇಕು.

ವಾಹನದ ವಿವರ

ಮಾಡೆಲ್	ಮೆಟಡೋರ್ ಡೀಸಲ್ ಮಿನಿಬಸ್
ಚಾಸಿ ಸಂಖ್ಯೆ	3 ಎಫ್‌ಡಿ 195579
ಇಂಜಿನ್ ಸಂಖ್ಯೆ	ಡಿ 181787
ಖರೀದಿಸಿದ ವರ್ಷ	1976
ರಿಜಿಸ್ಟರ್ ಸಂಖ್ಯೆ	ಎಂಇಎಕ್ಸ್ 6476

ಉಪ ಕೃಷಿ ನಿರ್ದೇಶಕರು,
ಜಿಲ್ಲಾ ಕೃಷಿ ತರಬೇತಿ ಕೇಂದ್ರ,
ಬೆಳ್ತಂಗಡಿ, ದಕ್ಷಿಣ ಕನ್ನಡ.

ಪಿ.ಆರ್.489

ಆಯ್ಕೆ ಪ್ರಾಧಿಕಾರ ಹಾಗೂ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು, ಕರ್ನಾಟಕ ರಾಜ್ಯ,
ನಂ.17, ಜಯನಿವಾಸ, ಶಂಕರಮಠ ರಸ್ತೆ, ಬೆಂಗಳೂರು-560 004

ಅಧಿಸೂಚನೆ

ಸಂಖ್ಯೆ: ಸಿಬ್ಬಂದಿ-2: ನೇಮಕಾತಿ: 01:2004-05, ದಿನಾಂಕ: 21ನೇ ಅಕ್ಟೋಬರ್, 2004

ಈ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ-2: ನೇಮಕಾತಿ:01:2004-05, ದಿನಾಂಕ: 30.04.2004ರಲ್ಲಿ ಒಂದು ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹಾಗೂ ಹೆಚ್ಚುವರಿ ಪಟ್ಟಿಯನ್ನು ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ: 07.09.2004ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು ಹಾಗೂ ಈ ವಿಚಾರದಲ್ಲಿ ಆಕ್ಷೇಪಗಳಿದ್ದಲ್ಲಿ ದಿನಾಂಕ: 30.09.2004ರೊಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಆಕ್ಷೇಪಗಳನ್ನು ಸಲ್ಲಿಸಲು ನಿಗದಿಪಡಿಸಲಾದ ದಿನಾಂಕವಾದ 30.09.2004ರೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಇದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಪಟ್ಟಿಯಲ್ಲಿನ ಅಭ್ಯರ್ಥಿಗಿಂತ ಹೆಚ್ಚಿನ ಶೇಕಡಾ ಅಂಕಗಳನ್ನು ಗಳಿಸಿ ಅರ್ಹತೆ ಇರುವ ಯಾವುದೇ ಅಭ್ಯರ್ಥಿಗಳು ಇರುವುದಿಲ್ಲವೆಂದು ಪರಿಗಣಿಸಿ ಕರ್ನಾಟಕ ಸರ್ಕಾರಿ ಸೇವಾ (ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಖಾಲಿ ಸ್ಥಾನಗಳ ವಿಶೇಷ ನೇಮಕಾತಿ) ನಿಯಮ 2001ರ ನಿಯಮ 6(1) ಹಾಗೂ 6(3)ರ ರೀತ್ಯ ಈ ಕೆಳಕಂಡ ಅರ್ಹ ಅಭ್ಯರ್ಥಿಗಳ ಆಯ್ಕೆ ಮುಖ್ಯ ಪಟ್ಟಿ ಹಾಗೂ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಮುಖ್ಯ ಪಟ್ಟಿ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಹಾಗೂ ವಿಳಾಸ	ಒಳ ಮೀಸಲಾತಿ	ಹುಟ್ಟಿದ ದಿನಾಂಕ	ಅರ್ಹತಾ ವಿದ್ಯಾರ್ಹತೆ	ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡಾ ಅಂಕಗಳು
1.	ಶ್ರೀ ಕೆ.ಬಿ. ರವಿಕುಮಾರ್, ಸನ್ ಆಫ್ ಕೆ. ಬಸಪ್ಪ, ಕಸವನಹಳ್ಳಿ, ಹನುಮಂತಪುಟ ಅಂಚೆ, ಜಗಳೂರು-577528	ಪರಿಶಿಷ್ಟ ಪಂಗಡ (ಇತರೆ)	18.11.70	ಎಸ್‌ಎಸ್‌ಎಲ್‌ಸಿ	68.00

ಹೆಚ್ಚುವರಿ ಪಟ್ಟಿ

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಹಾಗೂ ವಿಳಾಸ	ಒಳ ಮೀಸಲಾತಿ	ಹುಟ್ಟಿದ ದಿನಾಂಕ	ಅರ್ಹತಾ ವಿದ್ಯಾರ್ಹತೆ	ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡಾ ಅಂಕಗಳು
1.	ಶ್ರೀ ಚೆನ್ನಪ್ಪ ಸಂಜೀವಪ್ಪ ಕರಿಬಂಟನಾಳ, ಕೆ.ಪಿ.ಟಿ.ಸಿ.ಎಲ್. ಕಾಲೋನಿ, ರೂಮ್ ನಂ.5, ಜಮಖಂಡಿ-587301, ತಾ:ಜಮಖಂಡಿ, ಬಾಗಲಕೋಟೆ ಜಿಲ್ಲೆ.	ಪರಿಶಿಷ್ಟ ಪಂಗಡ (ಇತರೆ)	01.06.70	ಎಸ್‌ಎಸ್‌ಎಲ್‌ಸಿ	67.17

ಟಿ.ಎ. ಪಾರ್ಥಸಾರಥಿ
ನಿರ್ದೇಶಕರು.

ಪಿ.ಆರ್.490

ಜಲಸಂಪನ್ಮೂಲ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.4, ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ

ವಿಷಯ : ಟೆಂಡರ್ ಅವಧಿ ವಿಸ್ತರಣೆ ಕುರಿತು.

ಉಲ್ಲೇಖ :
1. ಈ ಕಛೇರಿ ಟೆಂಡರ್ ಪ್ರಕಟಣೆಯ ಪತ್ರದ ನಂ.324/20 ದಿನಾಂಕ: 10.05.04
2. ಈ ಕಛೇರಿ ಅವಧಿಯ ವಿಸ್ತರಣೆಯ ಪತ್ರದ ನಂ.608 ದಿನಾಂಕ:11.06.2004
3. ಈ ಕಛೇರಿ ತಿದ್ದುಪಡಿಯ ಪತ್ರದ ನಂ.710 ದಿನಾಂಕ: 22.06.2004
4. ಈ ಕಛೇರಿ ಅವಧಿಯ ವಿಸ್ತರಣೆಯ ಪತ್ರದ ನಂ.1429/16 ದಿನಾಂಕ: 16.08.2004.

ಮೇಲ್ಕಂಡ ವಿಷಯದ ಕುರಿತಂತೆ ಉಲ್ಲೇಖಿತ ಪತ್ರದಲ್ಲಿ ನಾಲ್ಕು ಕೆಲಸಗಳಿಗಾಗಿ ಟೆಂಡರು ಕರೆಯಲಾಗಿದ್ದು ಸದರಿ ಟೆಂಡರ್‌ಗೆ ಅವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ ಇನ್ನು ಉಳಿದಂತೆ ಮೂಲ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈಗಾಗಲೇ ಅರ್ಜಿ ಸಲ್ಲಿಸಿರುವ ಗುತ್ತಿಗೆದಾರರು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

1.	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	15.12.2004
2.	ಈ ಕಛೇರಿಯಿಂದ ಟೆಂಡರ್ ಫಾರಂ ಕೊಡುವ ದಿನಾಂಕ	18.12.2004
3.	ಗುತ್ತಿಗೆದಾರರಿಂದ ತುಂಬಲಾದ ಟೆಂಡರುಗಳನ್ನು ಸ್ವೀಕರಿಸುವ ದಿನಾಂಕ	20.12.2004

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು. ಟೆಂಡರಿನಲ್ಲಿ ಸೂಚಿಸಿರುವ ದಿನಾಂಕಗಳು ರಜಾ ದಿನವೆಂದು ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನವನ್ನು ಟೆಂಡರಿನಲ್ಲಿ ತಿಳಿಸಿದ ದಿನಾಂಕದ ಬದಲಾಗಿ ಪರಿಗಣಿಸಲಾಗುವುದು.

ಆರ್. ವೈಕುಂಠಯ್ಯ
ಕಾರ್ಯಪಾಲಕ ಇಂಜಿನಿಯರ್, ನಂ.4,
ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ.

ಪಿ.ಆರ್.491

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಟೆಂಡರ್ ಪ್ರಕಟಣೆ

ಸಂಖ್ಯೆ: ಸಿಆಸುಇ 7 ಡಿಸಿಎಲ್ 2004, ಬೆಂಗಳೂರು, ದಿನಾಂಕ: 14ನೇ ಅಕ್ಟೋಬರ್, 2004

ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್- ಡಿ ನೌಕರರಿಗೆ ಸಮವಸ್ತ್ರಗಳ ಉಪಯೋಗಕ್ಕಾಗಿ ಉತ್ತಮ ಗುಣಮಟ್ಟದ ಈ ಕೆಳಕಂಡ ಸಾಮಗ್ರಿಗಳನ್ನು ಖರೀದಿಸಲು ತಯಾರಕರಿಂದ ಅಥವಾ ಅವರ ಅಧಿಕೃತ ಮಾರಾಟಗಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳ ಮಾರಾಟಗಾರರು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ) ಕೊಠಡಿ ಸಂಖ್ಯೆ 25, ನೆಲಮಹಡಿ, ವಿಧಾನಸೌಧ ಇಲ್ಲಿ ರೂ.100.00 + ಶೇಕಡಾ 8ರಂತೆ ಮಾರಾಟ ತೆರಿಗೆಯನ್ನು ನಗದು ಅಥವಾ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ನೀಡಿ ರಸೀತಿಯನ್ನು ತೋರಿಸಿ ಪಡೆದುಕೊಳ್ಳಬಹುದು. ದಿನಾಂಕ: 16.11.2004ರಂದು ಮಧ್ಯಾಹ್ನ 12.00 ಗಂಟೆಯವರೆಗೆ ಟೆಂಡರ್ ಫಾರಂಗಳನ್ನು ನೀಡಲಾಗುವುದು. ಈ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.11.2004ರಂದು ಮಧ್ಯಾಹ್ನ 3.30 ಗಂಟೆ. ನಂತರ ಬಂದ ಟೆಂಡರ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್‌ಗಳನ್ನು ಟೆಂಡರ್ ಬುಲೆಟಿನ್ ಅಧಿಕಾರಿಯವರು ಕೊಠಡಿ ಸಂಖ್ಯೆ: 23, ವಿಧಾನಸೌಧ, ಬೆಂಗಳೂರು ಇಲ್ಲಿ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ: 17.11.2004 ಮಧ್ಯಾಹ್ನ 4.30 ಗಂಟೆಗೆ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕವು ಯಾವುದಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮಾರನೆಯ ಕೆಲಸದ ದಿನ ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ತೆರೆಯಲಾಗುವುದು. ಅಧಿಕೃತ ಮಾರಾಟಗಾರರ ಬಗ್ಗೆ ದೃಢೀಕರಣ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿರಬೇಕು:

1.	ಬಿಳಿ ಗ್ಯಾಬೆಡಿನ್ ಬಟ್ಟೆ	2616 ಮೀಟರ್
2.	ಖಾಕಿ ಗ್ಯಾಬೆಡಿನ್ ಬಟ್ಟೆ	840 ಮೀಟರ್
3.	ಸಿಮೆಂಟ್ ಬಣ್ಣದ ಟೆರಿಕಾಟ್ ಸೀರೆ	468 ಸಂಖ್ಯೆ
4.	ಸಿಮೆಂಟ್ ಬಣ್ಣದ ಟೆರಿಕಾಟ್ ರವಿಕೆ	468 ಸಂಖ್ಯೆ
5.	ಕಪ್ಪು ಬಣ್ಣದ ಬೂಟುಗಳು	576 ಜೊತೆ
6.	ಕಾಲುಚೀಲಗಳು	1152 ಜೊತೆ
7.	ಮಹಿಳೆಯರ ಚಪ್ಪಲಿಗಳು	234 ಜೊತೆ

ಟೆಂಡರ್‌ಗಳ ಷರತ್ತುಗಳು ಈ ಕೆಳಕಂಡಂತಿವೆ:

1. ಪುರುಷ ಸಿಬ್ಬಂದಿ:

ಅ) ಬಿಳಿ ಗ್ಯಾಬೆಡಿನ್/ ಖಾಕಿ ಗ್ಯಾಬೆಡಿನ್, ಬಟ್ಟೆಯ ಅಗಲ (ಪನ್ನ) 137 ಸೆಂಟಿಮೀಟರ್ ಇರಬೇಕು.

ಆ) ಬೂಟುಗಳು ಕಪ್ಪು ಬಣ್ಣದಾಗಿದ್ದು ಅದರ ಬೆಲೆಯು ಜೊತೆ ಒಂದಕ್ಕೆ ರೂ. 235-00 ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಇ) ಇವುಗಳು 6 ರಿಂದ 10 ಇಂಚಿನವರೆಗಿನ ಅಳತೆಯ ಬೂಟುಗಳಿಗೆ ಒಂದೇ ದರ ನಮೂದಿಸಬೇಕು.

ಈ) ಕಾಲುಚೀಲಗಳು ಕಪ್ಪು ಬಣ್ಣದಾಗಿದ್ದು, ಅದರ ಬೆಲೆಯು ಜೊತೆ ಒಂದಕ್ಕೆ ರೂ. 27-00 ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಉ) ಬೂಟುಗಳ ಅಳತೆಯಲ್ಲಿ ವ್ಯತ್ಯಾಸ ಇದ್ದಲ್ಲಿ ಬದಲಾಯಿಸಿಕೊಡಲು ಬದ್ಧರಿರಬೇಕು.

2. ಮಹಿಳಾ ಸಿಬ್ಬಂದಿ:

ಅ) ಸಿಮೆಂಟ್ ಬಣ್ಣದ ಸೀರೆ ಮತ್ತು ರವಿಕೆ ಟೆರಿಕಾಟ್ (ಶೇ: 67 ರಷ್ಟು ಪಾಲಿಸ್ಟರ್ ಶೇ. 33ರಷ್ಟು ಕಾಟನ್) ಸೀರೆಯ ಅಗಲ 117 ಸೆಂಟಿ ಮೀಟರ್ ಉದ್ದ 5.50 ಮೀಟರ್ ಒಳಗೊಂಡಿರಬೇಕು.

ಆ) ಚಪ್ಪಲಿಗಳು ಕಪ್ಪು ಅಥವಾ ಬ್ರೌನ್ ಬಣ್ಣದ್ದಾಗಿರಬೇಕು. ಅದರ ಬೆಲೆಯು ಜೊತೆ ಒಂದಕ್ಕೆ ರೂ. 97-00 ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಇ) ಇವುಗಳು 5 ರಿಂದ 9 ಇಂಚಿನವರೆಗಿನ ಅಳತೆಯ ಚಪ್ಪಲಿಗಳಿಗೆ ಒಂದೇ ದರ ನಮೂದಿಸಬೇಕು.

ಈ) ಚಪ್ಪಲಿಗಳ ಅಳತೆಯಲ್ಲಿ ವ್ಯತ್ಯಾಸ ಇದ್ದಲ್ಲಿ ಬದಲಾಯಿಸಿಕೊಡಲು ಬದ್ಧರಿರಬೇಕು.

3. ಮೊಹರಾದ ಟೆಂಡರ್‌ಗಳ ಲಕೋಟೆಯ ಮೇಲೆ ಸಮವಸ್ತ್ರಗಳ ಬಗ್ಗೆ ದರಪಟ್ಟಿ ಎಂದು ನಮೂದಿಸಿರಬೇಕು.

4. ಟೆಂಡರ್‌ದಾರರು ಸರಬರಾಜು ಮಾಡಲು ಪ್ರಸ್ತಾಪಿಸುವ ಬಟ್ಟೆಯ ಮಾದರಿ ಅಂದರೆ 1 ಮೀಟರ್ ಬಟ್ಟೆ (ಬಿಳಿ: ಖಾಕಿ) 1 ಸೀರೆ, 1 ಮೀಟರ್ ರವಿಕೆ ತುಂಡುಗಳನ್ನು ಹಾಗೂ ಬೂಟುಗಳು, ಕಾಲುಚೀಲಗಳು ಹಾಗೂ ಮಹಿಳೆಯರ ಚಪ್ಪಲಿಗಳನ್ನು ದರಪಟ್ಟಿಯೊಂದಿಗೆ ನೀಡುವುದು.

5. ಮೇಲ್ಕಂಡ ಎಲ್ಲಾ ಸಾಮಗ್ರಿಗಳಿಗೂ ದರಪಟ್ಟಿ ಒದಗಿಸಬಹುದು ಅಥವಾ ಟೆಂಡರ್‌ದಾರರು ಸರಬರಾಜು ಮಾಡಬಹುದಾದ ಸಾಮಗ್ರಿಗಳಿಗೆ ಮಾತ್ರ ದರಪಟ್ಟಿ ನೀಡಬಹುದು.

6. ಬಿಳಿ/ ಖಾಕಿ ಮತ್ತು ರವಿಕೆಗಳಿಗೆ ಸಂಬಂಧಿಸಿದಂತೆ ಪ್ರತಿ ಮೀಟರ್‌ಗೂ ಹಾಗೂ ಪ್ರತಿ ಸೀರೆ ಹಾಗೂ ಬೂಟುಗಳು, ಕಾಲುಚೀಲಗಳು ಮತ್ತು ಚಪ್ಪಲಿಗಳಿಗೆ ಜೊತೆ ಒಂದಕ್ಕೆ ಪ್ರತ್ಯೇಕ ದರ ನಮೂದಿಸಬೇಕು. ತೆರಿಗೆ ಇದ್ದಲ್ಲಿ ಪ್ರತ್ಯೇಕ ಸೂಚಿಸಬೇಕು.

7. ಸಮವಸ್ತ್ರಗಳಿಗೆ ಸಂಬಂಧಿಸಿದಂತೆ Make or Brand name ನಮೂದಿಸಬೇಕು.

8. ತೆರಿಗೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಮಾರಾಟ ತೆರಿಗೆಯನ್ನು ಬಿಲ್ಲು ಮೊತ್ತದಿಂದ ಕಡಿತಗೊಳಿಸಿ ಸರ್ಕಾರ ನೇರವಾಗಿ ಪಾವತಿಸುವುದು.

9. ಸರಬರಾಜು ಮಾಡುವ ಸಮವಸ್ತ್ರಗಳಿಗೆ 90 ದಿನಗಳವರೆಗಿನ ದರ ಸಿಂಧುತ್ವ (Validity) ಇರಬೇಕು.

10. ದರಪಟ್ಟಿಯೊಂದಿಗೆ ಠೇವಣಿ (ಇ.ಎಂ.ಡಿ.) ಹಣ ರೂ. 5,000-00 ಗಳ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಲೆಕ್ಕಪತ್ರ) ವಿಧಾನಸೌಧ, ಬೆಂಗಳೂರು-560 001 ಇವರಿಗೆ ಸಂಭೋದಿಸಿ ಲಗತ್ತಿಸತಕ್ಕದ್ದು.

11. ಯಶಸ್ವಿ ಟೆಂಡರ್‌ದಾರರ ಇ.ಎಂ.ಡಿ. ಮೊತ್ತವನ್ನು ಸಾಮಗ್ರಿಗಳನ್ನು ಸರಬರಾಜು ಮಾಡಿದ ನಂತರ ಷರತ್ತುಗಳ ಉಲ್ಲಂಘನೆ ಆಗಿರದಿದ್ದಲ್ಲಿ ಮಾತ್ರ ವಾಪಸ್ಸು ಮಾಡಲಾಗುವುದು. ಇದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.

12. ಅಯಶಸ್ವಿ ಟೆಂಡರ್‌ದಾರರ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಹಿಂದಿರುಗಿಸಲಾಗುವುದು. ಅದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.

13. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.11.2004 ರಂದು ಮಧ್ಯಾಹ್ನ 3.30 ಗಂಟೆಯೊಳಗೆ ಸಿ.ಆ.ಸು.ಇ. (ಕಾರ್ಯಕಾರಿ) ಕೊಠಡಿ ಸಂಖ್ಯೆ: 23, ನೆಲ ಮಹಡಿ, ವಿಧಾನಸೌಧ, ಬೆಂಗಳೂರು-560 001 ಈ ಕಛೇರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

14. ದರಪಟ್ಟಿಯೊಂದಿಗೆ ಠೇವಣಿಯನ್ನು (ಇ.ಎಂ.ಡಿ.) ಮೊತ್ತ ನೀಡದಿದ್ದಲ್ಲಿ ಮತ್ತು ಮೇಲಿನ ಅಂಶಗಳಿಗೆ ಪೂರ್ಣ ವಿವರವನ್ನು ನೀಡದಿದ್ದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

15. ಯಶಸ್ವಿ ಟೆಂಡರ್‌ದಾರರು ಆದೇಶ ಹೊರಡಿಸಿದ 10 ದಿನದೊಳಗಾಗಿ ಸಾಮಗ್ರಿಗಳನ್ನು ಒದಗಿಸಲು ಬದ್ಧರಿರಬೇಕು.

16. ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಸ್ವೀಕರಿಸುವ ಸಮರ್ಥ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಇವರ ನಿರ್ಣಯವೇ ಅಂತಿಮವಾದದ್ದು.

17. ಟೆಂಡರ್‌ಗಳನ್ನು ಟೆಂಡರ್ ಬುಲೆಟಿನ್ ಅಧಿಕಾರಿಯವರು ಕೊಠಡಿ ಸಂಖ್ಯೆ: 23 ವಿಧಾನಸೌಧ, ಬೆಂಗಳೂರು ಇಲ್ಲಿ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ: 17.11.2004 ಮಧ್ಯಾಹ್ನ 4.30 ಗಂಟೆಗೆ ತೆರೆಯಲಾಗುವುದು.

ಹೆಚ್.ಕೆ. ರವಿಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ-1).

ಪಿ.ಆರ್.492

ತೋಟಗಾರಿಕೆ ಇಲಾಖೆ

ವಿಶೇಷ ಅಧಿಕಾರಿಗಳ ಕಛೇರಿ, ತೋಟಗಾರಿಕೆ ಇಲಾಖೆ, ನಂದಿಗಿರಿಧಾಮ, ಚಿಕ್ಕಬಳ್ಳಾಪುರ ತಾಲ್ಲೂಕು

ಟೆಂಡರ್ ಆಹ್ವಾನ ಪ್ರಕಟಣೆ

ಸಂಖ್ಯೆ: ತೋಇ/ ವಿಅ/ ನಂದಿಗಿರಿ/ ವಿನಿ1 46/04-05, ದಿನಾಂಕ: 11ನೇ ಅಕ್ಟೋಬರ್, 2004

ಈ ಮೂಲಕ ಸಾರ್ವತ್ರಿಕ ಮತ್ತು ಕೇಟರಿಂಗ್ ವ್ಯವಸ್ಥೆ ನಿರ್ವಹಣಾದಾರರ ಗಮನಕ್ಕೆ ತರಬಯಸುವುದೇನೆಂದರೆ, ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿಗಿರಿಧಾಮದಲ್ಲಿ ತೋಟಗಾರಿಕೆ ಇಲಾಖಾ ವಶದಲ್ಲಿರುವ ಈ ಕೆಳಕಂಡಂತಹ ಅತಿಥಿ ಗೃಹಗಳ ಕೊಠಡಿಗಳಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವುದು ಮತ್ತು ಈ ಅತಿಥಿ ಗೃಹಗಳಲ್ಲಿ ತಂಗುವ ಯಾತ್ರಾರ್ಥಿ ಅಥವಾ ಅತಿಥಿಗಳಿಗೆ ಅನುಬಂಧದ-ಅ ದಲ್ಲಿ ನಿಗದಿಪಡಿಸಿರುವಂತಹ ದರಗಳಲ್ಲಿ ಊಟೋಪಚಾರ ಒದಗಿಸಲು ಪರಿಣಿತರಿಂದ ಮತ್ತು ಆಹ್ವಾನಿತರಿಂದ ದಿನಾಂಕ:01.01.2005 ರಿಂದ 31.12.2005 ರವರೆಗೆ ಒಂದು ವರ್ಷದ ಅವಧಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಬಯಸುವರು ಈ ಕೆಳಕಂಡ ಷರತ್ತುಗಳಿಗನುಗುಣವಾಗಿ ರೂ.500.00ನ್ನು ಟೆಂಡರ್ ಫಾರಂ ಶುಲ್ಕವಾಗಿ ಈ ಕಛೇರಿಗೆ ದಿನಾಂಕ: 01.11.2004ರಿಂದ 24.11.2004ರೊಳಗೆ ಕಛೇರಿ ವೇಳೆಯಲ್ಲಿ ಸಂದಾಯಿಸಿ ಟೆಂಡರ್ ಫಾರಂ ಪಡೆಯಬಹುದಾಗಿದೆ. ತಮ್ಮ ಕನಿಷ್ಠ ದರ ಸೂಚಿಸಿದ ಟೆಂಡರ್‌ನ್ನು ಸೀಲ್ಡ್ ಕವರ್‌ನಲ್ಲಿ ಅಗತ್ಯ ದಾಖಲೆಗಳೊಂದಿಗೆ ಅಡಕವಿಟ್ಟು, ಸೀಲ್ ಮಾಡಿ ಕವರಿನ ಮೇಲೆ ನಂದಿ ಗಿರಿಧಾಮದ ವಸತಿ ಗೃಹಗಳ ನಿರ್ವಹಣಾ ಟೆಂಡರ್ ದಿನಾಂಕ: 01.01.2005ರಿಂದ 31.12.2005 ಅವಧಿಗೆ ಎಂದು ಸ್ಪಷ್ಟವಾಗಿ ಬರೆದು ಈ ಕಛೇರಿಗೆ ದಿನಾಂಕ: 25.11.2004ರಂದು ಸಂಜೆ 4.00 ಗಂಟೆಯೊಳಗೆ ಸಲ್ಲಿಸಬೇಕು ಅದೇ ದಿನ ಸಂಜೆ 5.00 ಗಂಟೆಗೆ ಲಭ್ಯ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್‌ಗಳು ತೆರೆಯಲಾಗುವುದು.

ನಿಬಂಧನೆಗಳು

1. ಕಛೇರಿ ಟೆಂಡರ್ ಫಾರಂನಲ್ಲಿ ಮಾತ್ರ ಟೆಂಡರ್ ಸಲ್ಲಿಸಬೇಕಿದ್ದು, ಟೆಂಡರ್ ಫಾರಂನೊಂದಿಗೆ ಈ ಕಛೇರಿಯಿಂದ ಟೆಂಡರ್ ಫಾರಂ ಶುಲ್ಕ ಸ್ವೀಕರಿಸಿದ ಜಿ.ಆರ್.ನ್ನು ಲಗತ್ತಿಸಿರಬೇಕು. ಅಧಿಕೃತ ಟೆಂಡರ್ ಫಾರಂ ಬಿಟ್ಟು ಅನ್ಯಥಾ ಬರುವ ಯಾವುದೇ ದರ ಪಟ್ಟಿ ಪತ್ರಗಳನ್ನು ಟೆಂಡರ್‌ಗಳೆಂದು ಸ್ವೀಕರಿಸುವುದಿಲ್ಲ ಅಥವಾ ಅಂಗೀಕರಿಸುವುದಿಲ್ಲ.

2. ಟೆಂಡರ್‌ನೊಂದಿಗೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ವಿಶೇಷಾಧಿಕಾರಿಗಳು, ತೋಟಗಾರಿಕೆ ಇಲಾಖೆ, ನಂದಿಗಿರಿಧಾಮ ಇವರಿಗೆ ಸಂದಾಯವಾಗುವಂತೆ ಪಡೆದ ರೂ. 5,000-00 (ಐದು ಸಾವಿರ ಮೊತ್ತದ) ಡಿ.ಡಿ.ಯನ್ನು ಲಗತ್ತಿಸಿರಬೇಕು. ಮೇಲ್ಕಾಣಿಸಿದ ರೀತಿಯಲ್ಲಿ ಡಿ.ಡಿ. ಲಗತ್ತಿಸಿಲ್ಲದ ಟೆಂಡರ್‌ಗಳು ತಿರಸ್ಕರಿಸಲಾಗುವುದು. ಅಂಗೀಕೃತವಾಗಿರುವ ಸಂಸ್ಥೆಯ ಡಿ.ಡಿ. ಹೊರತುಪಡಿಸಿ ಬೇರೆಲ್ಲಾ ಸಂಸ್ಥೆಗಳು ಡಿ.ಡಿ.ಗಳನ್ನು ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು. ಅಂಗೀಕೃತ ಸಂಸ್ಥೆಯ ಡಿ.ಡಿ. ಬ್ಯಾಂಕ್ ಗ್ಯಾರಂಟಿ ನೀಡಿದ ಕೂಡಲೇ ವಾಪಸ್ಸು ಕೊಡಲಾಗುವುದು. ಅಂಗೀಕೃತ ಸಂಸ್ಥೆಯ ಡಿ.ಡಿ. ಬ್ಯಾಂಕ್ ಗ್ಯಾರಂಟಿ ನೀಡಿದ ಕೂಡಲೇ ವಾಪಸ್ಸು ಕೊಡಲಾಗುವುದು.

3. ಈ ಕಾರ್ಯನಿರ್ವಹಣೆಗೆ ಟೆಂಡರ್ ಸಲ್ಲಿಸಬಯಸುವವರು ಹಿಂದೆ ಅಥವಾ ಪ್ರಸ್ತುತ ಕೇಂದ್ರ/ ರಾಜ್ಯ ಸರ್ಕಾರಗಳ ಅಥವಾ ಅಧಿಕೃತ ಸರ್ಕಾರಿ ಸಂಸ್ಥೆಗಳ ಅಧೀನದಲ್ಲಿನ ಅತಿಥಿ ಗೃಹಗಳಲ್ಲಿನ ಕನಿಷ್ಟ 25 ಕೊಠಡಿಗಳ ಸ್ವಚ್ಛತಾ ಕಾರ್ಯ ನಿರ್ವಹಿಸಿದ ಮೂರು ವರ್ಷದ ಸೇವಾ ಅನುಭವ ಪ್ರಮಾಣ ಪತ್ರ ಟೆಂಡರ್‌ನೊಂದಿಗೆ ಲಗತ್ತಿಸಬೇಕು. ಈ ಪ್ರಮಾಣ ಪತ್ರ ಲಗತ್ತಿಸಿಲ್ಲದ ಟೆಂಡರ್ ತಿರಸ್ಕರಿಸಲಾಗುವುದು.

4. 2003-04ನೇ ಸಾಲಿನ ಆದಾಯ ತೆರಿಗೆ ಇಲಾಖೆಯಿಂದ ಪಡೆದಂತಹ ಕ್ಲಿಯರೆನ್ಸ್ ಸರ್ಟಿಫಿಕೇಟ್ ಮತ್ತು ಈ ಕಾರ್ಯನಿರ್ವಹಣಾ ಸಂಬಂಧವಾಗಿ ಸಿಬ್ಬಂದಿ/ನೌಕರರ/ಕಾರ್ಮಿಕರನ್ನು ಈ ಕೆಲಸಗಳಿಗೆ ತೊಡಗಿಸುವ ಸಲುವಾಗಿ ಕಾರ್ಮಿಕ ಇಲಾಖೆಯಿಂದ ಪಡೆದಂತಹ ಪ್ರಮಾಣ ಪತ್ರಗಳು ಟೆಂಡರ್‌ನೊಂದಿಗೆ ಸಲ್ಲಿಸಬೇಕು. ಈ ಪ್ರಮಾಣ ಪತ್ರಗಳು ಟೆಂಡರ್‌ನೊಂದಿಗೆ ಲಗತ್ತಿಸಿಲ್ಲದಿದ್ದರೆ ತಿರಸ್ಕರಿಸಲಾಗುವುದು.

5. ಈ ಕಛೇರಿಯ ಅಧೀನಕ್ಕೆ ಬರುವ ಅತಿಥಿ ಗೃಹಗಳಲ್ಲಿ ತಂಗುವ ಅತಿಥಿಗಳಿಗೆ ಮತ್ತು ಅಧಿಕೃತ ಸರ್ಕಾರಿ ಅಧಿಕಾರಿ/ ಸರ್ಕಾರಿ ಅಧಿಕೃತ ಕಾರ್ಯಗಳ ಮೇಲೆ ಬರುವ ಅಧಿಕಾರಿ- ನೌಕರರು ಮತ್ತು ಗಣ್ಯ ವ್ಯಕ್ತಿಗಳಿಗೆ ಮಾತ್ರ ಊಟ ಮತ್ತಿತರ ಸೇವಾ ಸೌಲಭ್ಯ ಒದಗಿಸಬೇಕು. ಇದನ್ನು ಬಿಟ್ಟು ಬೇರೆ ಯಾವುದೇ ಸಾರ್ವಜನಿಕರಿಗೆ ಯಾವುದೇ ಕಾರಣಕ್ಕೂ ಈ ಸೌಲಭ್ಯ ಒದಗಿಸಬಾರದು.

6. ಸರ್ಕಾರಿ ಅಧಿಕೃತ ಕಾರ್ಯಗಳ ಮೇಲೆ ಬರುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಹಾಗೂ ಅಧಿಕೃತ ಸರ್ಕಾರಿ ಅತಿಥಿಗಳು ಅತಿಥಿ ಗೃಹಗಳಲ್ಲಿ ತಂಗಿದ್ದಾಗ ನಿಯಮಾನುಸಾರ ಕಛೇರಿಯಿಂದ ಸೂಚಿಸಲ್ಪಟ್ಟಾಗ ರಾಜ್ಯ ಅತಿಥೇಯ ಸಂಸ್ಥೆಯಿಂದ ನೀಡುವ ದರಗಳಲ್ಲಿ ಅವರಿಗೆ ಊಟೋಪಚಾರ ಸೌಲಭ್ಯ ನೀಡಬೇಕು.

7. ಗುತ್ತಿಗೆದಾರರಿಗೆ ವಹಿಸುವ ಅಡುಗೆ ವ್ಯವಸ್ಥೆಗೆ ಸಂಬಂಧಿಸಿದ ಅಡುಗೆ ಕೋಣೆ ಮತ್ತು ಅತಿಥಿ ಗೃಹನಿರ್ವಹಣೆಗೆ ದಾಸ್ತಾನು ಕೋಣೆಯನ್ನು ನೀಡಲಾಗುವುದು. ಈ ಕೋಣೆಗಳ ವಿದ್ಯುತ್ ವೆಚ್ಚ ಮತ್ತು ನೀರಿನ ತೆರಿಗೆಯನ್ನು ಗುತ್ತಿಗೆದಾರರೇ ಭರಿಸಬೇಕು. ಅಲ್ಲದೆ ತೋಟಗಾರಿಕೆ ನಿರ್ದೇಶಕರು ಈ ಕೊಠಡಿಗಳಿಗೆ ವಿಧಿಸುವ ಬಾಡಿಗೆ ಸಂದಾಯಿಸಬೇಕು.

8. ಅತಿಥಿ ಗೃಹಗಳಲ್ಲಿನ ಪಿಠೋಪಕರಣಗಳು, ಲೆನಿನ್ ವಸ್ತುಗಳು ಮತ್ತು ಕೊಠಡಿಯನ್ನು ಪ್ರತಿನಿತ್ಯ ಶುಚಿಗೊಳಿಸಬೇಕು. ಈ ಕಾರ್ಯಗಳಿಗೆ ಬೇಕಾಗುವ ಫಿನಾಯಿಲ್, ಬ್ಲೀಚಿಂಗ್ ಪೌಡರ್ ಇತ್ಯಾದಿಗಳನ್ನು ಗುತ್ತಿಗೆದಾರರೇ ಭರಿಸತಕ್ಕದ್ದು, ಮತ್ತು ಸ್ಯಾನಿಟರಿ ಹಾಗೂ ವಿದ್ಯುತ್ ಇತ್ಯಾದಿ ಸಣ್ಣಪುಟ್ಟ ದುರಸ್ಥಿಗಳನ್ನು ಸಹ ಗುತ್ತಿಗೆದಾರರೇ ನಿರ್ವಹಿಸಬೇಕು ಮತ್ತು ನಿರ್ವಹಣಾ ಕಾರ್ಯವನ್ನು ಅಧಿಕಾರಿಗಳು ನೀಡುವ ಸಲಹೆ ಸೂಚನೆ ಪಡೆದು ನಿರ್ವಹಿಸಬೇಕು.

9. ಕೊಠಡಿಗಳಲ್ಲಿನ ಪಿಠೋಪಕರಣಗಳ ಸುರಕ್ಷತೆ ಮತ್ತು ಸಂರಕ್ಷಣೆಯ ಸಲುವಾಗಿ ರೂ. 1.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕೊಂದರಿಂದ ಒದಗಿಸಬೇಕು. ಈ ಬ್ಯಾಂಕ್ ಗ್ಯಾರಂಟಿಯನ್ನು ಗುತ್ತಿಗೆ ಕೆಲಸಗಳು ವಹಿಸಿಕೊಳ್ಳುವ ಮೊದಲು ಹಾಜರುಪಡಿಸತಕ್ಕದ್ದು, ಗುತ್ತಿಗೆ ಕೆಲಸಗಳಿಗೆ ವಹಿಸಿಕೊಟ್ಟಿರುವ ಸಾಮಗ್ರಿಗಳನ್ನು ಸುರಕ್ಷಿತವಾಗಿ ಇಲಾಖೆಗೆ ವಹಿಸಿಕೊಟ್ಟ ನಂತರವಷ್ಟೇ ಬ್ಯಾಂಕ್ ಗ್ಯಾರಂಟಿ ಬಿಡುಗಡೆ ಮಾಡಲಾಗುವುದು.

10. ಕೊಠಡಿಗಳಲ್ಲಿನ ಸ್ವಚ್ಛತಾ ಮತ್ತು ಸೇವಾ ಕಾರ್ಯಗಳು ಯಶಸ್ವಿಯಾಗಿ ಮತ್ತು ತೃಪ್ತಿದಾಯಕವಾಗಿ ನಿರ್ವಹಿಸಲಾಗಿದೆಯೆಂದು ಸಂಬಂಧಿಸಿದ ಅಧಿಕಾರಿಗಳು ದೃಢೀಕರಣ ನೀಡಿದ ನಂತರವಷ್ಟೇ ಆಯಾ ಮಾಹೆಯ ಹಣ ಪಾವತಿ ಕ್ರಮ ಜರುಗಿಸಲಾಗುವುದು.

11. ಟೆಂಡರುಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್ ಬೆಂಗಳೂರು ರವರಲ್ಲಿ ಕಾಯ್ದಿರಿಸಿದೆ. ಮತ್ತು ಗುತ್ತಿಗೆದಾರರ ಸಂಸ್ಥೆ ರಿಜಿಸ್ಟ್ರೇಷನ್‌ಗೆ ಸಂಬಂಧಿಸಿದ ದಾಖಲೆಗಳು ಟೆಂಡರ್ ಜೊತೆಗೆ ಲಗತ್ತಿಸಬೇಕು.

12. ಸ್ವಚ್ಛತಾ ಮತ್ತು ಸೇವಾ ಕಾರ್ಯ ಒದಗಿಸಬೇಕಾದ ಅತಿಥಿಗೃಹಗಳ ವಿವರಗಳು:

1) ನೆಹರು ನಿಲಯದ 14 ಕೊಠಡಿಗಳು ಮತ್ತು ಡೈನಿಂಗ್ ಹಾಲ್

2) ಟೂರಿಸ್ಟ್ ಕಾಟೇಜ್‌ಗಳು-5 ಸಂಖ್ಯೆ

3) ಪಾಲರ್ ಖ I, II ಅರ್ಕಾವತಿ ಮತ್ತು ಚನ್ನಗಿರಿ II

4) ನೆಹರು ನಿಲಯದ ಮೊದಲ ಅಂತಸ್ತಿನ ವಿವಿಐಪಿ ಕೊಠಡಿಗಳು-4 ಸಂಖ್ಯೆ ಮತ್ತು ಅದರ ಸಮುಚ್ಛಯ.

13. ಅನುಬಂಧ ಆ ರಲ್ಲಿ ಸೂಚಿಸಿದ ಊಟದ ತಿಂಡಿಗಳು ಹೊರತುಪಡಿಸಿ ಮತ್ಯಾವುದಾದರೂ ಹೊಸ ಮಾದರಿಯ ತಿಂಡಿ ತಿನಿಸುಗಳು ತಯಾರುಮಾಡಿ ಸರಬರಾಜು ಮಾಡುವಾಗ ಗುತ್ತಿಗೆದಾರರು, ಆ ತಿಂಡಿಗಳ ವಿವರಗಳನ್ನು ಈ ಕಛೇರಿಗೆ ಸಲ್ಲಿಸಿ ನಿರ್ದೇಶನಾಲಯದಿಂದ ಅನುಮೋದನೆ ಪಡೆಯಬೇಕಿರುತ್ತದೆ. ಮತ್ತು ಟೆಂಡರ್‌ನ ಅವಧಿಯ ಯಾವುದೇ ಸಂದರ್ಭದಲ್ಲಿ ಸರ್ಕಾರಿ ಹಿತದೃಷ್ಟಿಯಿಂದ ಕೈಗೊಳ್ಳುವ ಕ್ರಮಗಳಿಗೆ ಬದ್ಧವಾಗಿರಬೇಕು.

14. ಊಟದ ವ್ಯವಸ್ಥೆಗೆ ಅವಶ್ಯಕವಾದ ದಿನಸಿಗಳು ಎಲ್ಲವೂ ಟೆಂಡರ್‌ದಾರರೇ ಭರಿಸಿಕೊಳ್ಳಬೇಕು. ಇಲಾಖೆಯಿಂದ ಯಾವುದೇ ದಿನಸಿ ಪದಾರ್ಥಗಳು ಒದಗಿಸುವುದಿಲ್ಲ. ಊಟೋಪಚಾರದ ನಿಗದಿತ ದರಗಳನ್ನು ಟೆಂಡರ್‌ದಾರರೇ ಅತಿಥಿಗಳಿಂದ ವಸೂಲಿ ಮಾಡಿಕೊಳ್ಳತಕ್ಕದ್ದು. ನಿಗದಿತ ದರಕ್ಕಿಂತ ಹೆಚ್ಚಿನ ದರಗಳಲ್ಲಿ ಊಟೋಪಚಾರ ಒದಗಿಸಿದ ಬಗ್ಗೆ ಅತಿಥಿಗಳಿಂದ ದೂರುಗಳು ಸ್ವೀಕೃತವಾದರೆ ಬ್ಯಾಂಕ್ ಗ್ಯಾರಂಟಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದರೊಂದಿಗೆ ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಸಹ ರದ್ದುಗೊಳಿಸಲಾಗುವುದು.

15. ಟೆಂಡರ್ ಅಂಗೀಕೃತವಾದ ಕೂಡಲೇ ಸೇವಾ ಮತ್ತು ಸ್ವಚ್ಛತಾ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮುನ್ನ ಟೆಂಡರ್ ಷರತ್ತುಗಳು ಒಪ್ಪಿದ ಬಗ್ಗೆ ರೂ. 100-00 ಛಾಪಾ ಕಾಗದದ ಮೇಲೆ ಇಲಾಖೆಗೆ ಕರಾರು ಮಾಡಿಕೊಡಬೇಕು.

ವಿಶೇಷ ಅಧಿಕಾರಿ

ತೋಟಗಾರಿಕೆ ಇಲಾಖೆ, ನಂದಿಗಿರಿಧಾಮ.

ಅನುಬಂಧ-ಅ

ಊಟ, ಉಪಚಾರ, ಕಾಫಿ, ಮತ್ತಿತ್ತ್ಯಾದಿ ಸೇವಾ ಸೌಲಭ್ಯಗಳ ದರಗಳು

ಕ್ರಮ ಸಂಖ್ಯೆ	ವಿವರಗಳು	ದರ ರೂ. ಪೈ.
1.	ಫುಲ್ ಮೀಲ್ಸ್ ಅನ್ನಸಾಂಬಾರ್, 2 ಚಪಾತಿ ಅಥವಾ 3 ಪೂರಿ, 2 ತರಕಾರಿ ಪಲ್ಯ, ಮೊಸರು, ಮಜ್ಜಿಗೆ, ಹಪ್ಪಳ ಮತ್ತು ಉಪ್ಪಿನಕಾಯಿ	30-00
2.	ಪ್ಲೇಟ್ ಮೀಲ್ಸ್ ಅನ್ನಸಾಂಬಾರ್, 1 ಚಪಾತಿ ಅಥವಾ 2 ಪೂರಿ, 2 ತರಕಾರಿ ಪಲ್ಯ, ಮೊಸರು, ಮಜ್ಜಿಗೆ, ಹಪ್ಪಳ ಮತ್ತು ಉಪ್ಪಿನಕಾಯಿ	20-00
3.	2-ಇಡ್ಲಿ ಚಟ್ನಿ: ಸಾಂಬಾರು (ಪ್ರತಿಯೊಂದು ಇಡ್ಲಿ 40 ಗ್ರಾಂ ಇರಬೇಕು)	7-00
4.	ಒಂದು ಉದ್ದಿನ ವಡೆ (40 ಗ್ರಾಂ ನದು)	6-00
5.	ಚಿತ್ರಾನ್ನ, ಮೊಸರನ್ನ, ಪಲಾವ್, ಪೊಂಗಲ್: ಟೊಮ್ಯಾಟೋ ಬಾತ್, ಚೌಚೌ ಬಾತ್: ಇವುಗಳಲ್ಲಿ ಯಾವುದಾದರೂ ಒಂದು ಪ್ಲೇಟ್‌ನ ದರ	9-00
6.	ಮಸಾಲೆ ದೋಸೆ: ಈರುಳ್ಳಿ ದೋಸೆ (ಒಂದಕ್ಕೆ) ಚಟ್ನಿ ಸೇರಿ	10-00
7.	ಖಾಲಿ ದೋಸೆ 2ಕ್ಕೆ (ಚಟ್ನಿ ಸೇರಿ)	7-00
8.	ಪಕೋಡ/ ಬಜ್ಜಿ/ ಬೋಂಡ/ ಒಂದು ಪ್ಲೇಟ್‌ಗೆ	8-00
9.	ಮಸಾಲೆ ವಡೆ ಒಂದಕ್ಕೆ	5-00
10.	2 ರವೆ ಇಡ್ಲಿ/ 2 ಪೂರಿ (ಸಾಗು ಮತ್ತು ಚಟ್ನಿ)	8-50
11.	ಕಾಫೀ, ಟೀ, ಬಾದಾಮಿ ಹಾಲು ಮತ್ತು ಗಟ್ಟಿ ಹಾಲು ಒಂದು ಕಪ್‌ಗೆ	6-00
12.	ಶಾವಿಗೆ ಬಾತ್-ಒಂದು ಪ್ಲೇಟ್‌ಗೆ	13-00
13.	ಬಿಸಿಬೇಳೆ ಬಾತ್ ವಿತ್ ಗೀ	13-00
14.	ಸೆಟ್ ದೋಸೆ-3ಕ್ಕೆ	13-00
15.	ಅಕ್ಕಿ ರೊಟ್ಟಿ- 2ಕ್ಕೆ	13-00
16.	ರಾಗಿ ರೊಟ್ಟಿ-2ಕ್ಕೆ	10-00
17.	ಆಲೂ ಪರೋಟ -2ಕ್ಕೆ	11-00
18.	ಸ್ಪೆಷಲ್ ಪರೋಟ-1ಕ್ಕೆ	9-00
19.	ಉತ್ತರ ಭಾರತದ ಫುಲ್ ಮೀಲ್ಸ್, ಸೂಪ್, ಸಾಲಡ್, ಹಪ್ಪಳ, ಸಬ್ಜಿ, ಪಲ್ಯ, ಫುಲ್ಕ, ಅನ್ನ, ಮೊಸರನ್ನ, ಸ್ವೀಟ್.	40-00
20.	ದಕ್ಷಿಣ ಭಾರತದ ಫುಲ್ ಮೀಲ್ಸ್ (ಸ್ಪೆಷಲ್ ಮೀಲ್ಸ್) 1-ಸ್ವೀಟ್, 3-ಪಲ್ಯ, ಕರ್ಡ್ ರೈಸ್, ಚಪಾತಿ, ಸಬ್ಜಿ, ಪಲಾವು, ರೈಸ್, ರಸಂ, ಬಾಳೆಹಣ್ಣು.	40-00
21.	ಪೀಸ್ ಪಲಾವ್	12-00
22.	ವೆಜಿಟೆಬಲ್ ಫ್ರೈಡ್ ರೈಸ್	17-00
23.	ಗೀರೈಸ್	17-00
24.	ಎಗ್ ಫ್ರೈಡ್ ರೈಸ್	24-00
25.	ಚಿಕನ್ ಫ್ರೈಡ್ ರೈಸ್	32-00
26.	ಮಟನ್ ಪಲಾವ್	55-00
27.	ಚಿಕನ್ ಪಲಾವ್	50-00
28.	ಗ್ರೀನ್ ಸಾಲಡ್	10-00
29.	ಎಗ್ ಬೋಂಡ	12-00
30.	ಎಗ್ ಬುರ್ಜಿ	12-00
31.	ಆಮ್ಲೆಟ್ ಸಿಂಗಲ್	8-00
32.	ಆಮ್ಲೆಟ್ ಡಬಲ್	16-00
33.	ಎಗ್ ಮಸಾಲ	16-00
34.	ಗೋಬಿ ಮಂಚೂರಿ	30-00

ಕ್ರಮ ಸಂಖ್ಯೆ	ವಿವರಗಳು	ದರ ರೂ. ಪೈ.
35.	ಫಿಶ್ ಕಬಾಬ್	40-00
36.	ಫಿಶ್ ಟಿಕ್ಕಾ	45-00
37.	ಫಿಶ್ ಕರ್ರಿ	40-00
38.	ನಾನ್-ಒಂದು	7-00
39.	ರೋಟಿ-ಒಂದು	6-00
40.	ಬಟರ್ ನಾನ್-ಒಂದು	8-00
41.	ಕುಲ್ಚಾ	8-00
42.	ಕಲಾಮಿ ಕಬಾಬ್	45-00
43.	ತಂದೂರಿ ಚಿಕನ್	60-00
44.	ದಾಲ್ ಫ್ರೈ	12-00
45.	ಚೆನ್ನಾ ಮಸಾಲ	12-00
46.	ಗ್ರೀನ್ ಪೀಸ್ ಮಸಾಲ	12-00
47.	ವೆಜಿಟಬಲ್ ಕರ್ರಿ	12-00
48.	ಬಟರ್ ಚಿಕನ್	50-00
49.	ಚಿಕನ್ ಫ್ರೈ	50-00
50.	ಚಿಕನ್ 65	50-00
51.	ಗಾರ್ಲಿಕ್ ಚಿಕನ್	50-00
52.	ಜಿಂಜರ್ ಚಿಕನ್	50-00
53.	ಚಿಕನ್ ಫ್ರೈ/ ಚಿಕನ್ ಮಸಾಲ	50-00
54.	ಚಿಕನ್ ಒಂದು ಕೆ.ಜಿ. ಗೆ ಮಸಾಲೆ ಬಳಸಿ ಬೇಕಾದ ಐಟಂ ತಯಾರು ಮಾಡಿಕೊಡಲು	
	1. ಚಿಕನ್ ಮಸಾಲ ಫ್ರೈ	45-00
	2. ಕಬಾಬ್, ಚಿಲ್ಲಿ, ಚಿಲ್ಲಿ-65, ಬಟರ್, ಗಾರ್ಲಿಕ್, ಜಿಂಜರ್	50-00
55.	ಮಟನ್ ಒಂದು ಕೆ.ಜಿ.ಗೆ ಮಸಾಲೆ ಬಳಸಿ ಬೇಕಾದ ಐಟಂ ತಯಾರು ಮಾಡಿಕೊಡಲು ಮಟನ್ ಮಸಾಲ/ ಫ್ರೈ ಮತ್ತಿತರೆ	50-00
56.	ಆಲೂಗೋಬಿ	12-00

ವಿಶೇಷ ಅಧಿಕಾರಿ

ಪಿ.ಆರ್.493 ತೋಟಗಾರಿಕೆ ಇಲಾಖೆ, ನಂದಿಗಿರಿಧಾಮ.

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಬೆಂಗಳೂರು ನಗರ ವಿಭಾಗ, ಬೆಂಗಳೂರು

ಟೆಂಡರ್ ಮತ್ತು ಹರಾಜು ಮಾರಾಟ ಪ್ರಕಟಣೆ

ಸಂಖ್ಯೆ: ಎ5. ವಾಹನ. ವಿಲೆ.ಜಿ.ಎಲ್./ 04-05, ಬೆಂಗಳೂರು, ದಿನಾಂಕ: 18ನೇ ಅಕ್ಟೋಬರ್, 2004

ಈ ಮೂಲಕ ಸಮಸ್ತ ಜನರಿಗೆ ತಿಳಿಪಡಿಸುವುದೇನೆಂದರೆ ಅರಣ್ಯ ಮೊಕದ್ದಮೆ ಸಂಖ್ಯೆ: 1/98-99ರಲ್ಲಿ 10 ಬೀಟೆ ಮರಗಳನ್ನು ಅಂದರೆ 3.277 Cmtr ಸರ್ಕಾರಕ್ಕೆ ವಶಪಡಿಸಿ ಮುಟ್ಟುಗೋಲು ಹಾಕಿಕೊಂಡು ಮೊಕದ್ದಮೆಯನ್ನು ಇತ್ಯರ್ಥಗೊಳಿಸಲಾಗಿದೆ. ಆದುದರಿಂದ ದಿನಾಂಕ: 18.11.2004ರಂದು ಅಪರಾಹ್ನ 3.00 ಗಂಟೆಗೆ ಸರಿಯಾಗಿ ಜಾರಕಬಂಡೆ ಕಾವಲ್, ಉಗ್ರಾಣದಲ್ಲಿ ಹೇಗಿದೆಯೋ ಹಾಗೆ ಇರುವ ಸ್ಥಿತಿಯಲ್ಲಿಯೇ ಅಪರಾಹ್ನ 3.00 ಗಂಟೆಗೆ ಸರಿಯಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡುತ್ತಾರೆ. ಇಷ್ಟವುಳ್ಳ ಬಿಡ್ಡುದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್ ಕಂ ಹರಾಜಿನಲ್ಲಿ ಪಾಲ್ಗೊಳ್ಳಬಹುದು. 18.11.2004ರಂದು ಹರಾಜು ನಡೆಯದಿದ್ದಲ್ಲಿ ಕ್ರಮವಾಗಿ 22.11.2004ರಂದು ಅದೇ ಸ್ಥಳದಲ್ಲಿ ನಡೆಸಲಾಗುವುದು.

ಕ್ರಮ ಸಂಖ್ಯೆ	ವಿವರ	ಮರದ ವಿವರ	ಹರಾಜಿನ ದಿನಾಂಕ
1.	ಜೆ.ಬಿ. ಕಾವಲ್ ಅರಣ್ಯ ಉಗ್ರಾಣ	3.277 Cmtr 10 Nos. Rose Wood	18.11.2004

ನಿಯಮಗಳು

1. ಟೆಂಡರ್‌ನಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅರ್ಜಿದಾರರು ನಿಗದಿತ ನಮೂನೆಯ ಟೆಂಡರ್ ಫಾರಂಗಳನ್ನು ರೂ 12.00 ಪಾವತಿಸಿ ಪಡೆಯುವುದು. ಪ್ರತಿ ಟೆಂಡರ್‌ಗೆ ರೂ. 3000ಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರ (ಹೆಸರಿಗೆ) ಪದನಾಮಕ್ಕೆ ಡಿ.ಡಿ. ತೆಗೆದು ಟೆಂಡರ್ ಜೊತೆಯಲ್ಲಿ ಲಗತ್ತಿಸಿ ಅಥವಾ ಹರಾಜಿಗೆ ಹಾಜರಾಗುವ ಮುನ್ನ ರೂ. 3000ಗಳನ್ನು ಇ.ಎಂ.ಡಿ. ಮೂಲಕ ಕಟ್ಟಿ ಭಾಗವಹಿಸುವುದು.

2. ಹರಾಜಿನಲ್ಲಿ ಭಾಗವಹಿಸಲು ಇಚ್ಚಿವುಳ್ಳವರು ಹರಾಜು ಪ್ರಾರಂಭವಾಗುವ ಮುನ್ನ ಕಛೇರಿಯ ವೇಳೆಯಲ್ಲಿ ಬೀಟೆ ಮರ ಇರುವ ಸ್ಥಳವನ್ನು ಪರೀಕ್ಷಿಸಿ ಸ್ಥಿತಿಗತಿಯನ್ನು ತಪಾಸಣೆ ಮಾಡಿಕೊಂಡು ಖಾತ್ರಿ ಮಾಡಿಕೊಳ್ಳತಕ್ಕದ್ದು. ಹರಾಜು ಮುಗಿದ ನಂತರ ಯಾವ ದೂರನ್ನು ಪರಿಗಣಿಸುವುದಿಲ್ಲ.

3. ಯಶಸ್ವಿಯಾದ ಬಿಡ್ಡುದಾರರು ಹರಾಜು ಮುಗಿದ ತಕ್ಷಣ ಹರಾಜಿನ ಮೊತ್ತದ 1/2 ಭಾಗ (ಠೇವಣಿ ಹಣವು ಸೇರಿದಂತೆ) ಮತ್ತು ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳ ಸಹಿತ (ಎಫ್‌ಡಿಟಿ ಶೇ.8% ಮತ್ತು ಎಸ್‌ಟಿ 15%) ಹಣವನ್ನು ಪಾವತಿಸಿ ರಶೀದಿಯನ್ನು ಪಡೆದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಮೂಲ ಬಿಡ್ಡುದಾರರ ಸ್ವಂತ ಖರ್ಚು ಮತ್ತು ಜವಾಬ್ದಾರಿಯ ಮೇರೆಗೆ ಮರು ಹರಾಜು ಮಾಡಲಾಗುವುದು. ತಪ್ಪಿತಸ್ಥರು ಮರು ಹರಾಜಿನಲ್ಲಿ ಆದಂತಹ ನಷ್ಟ ತುಂಬಿಕೊಡಲು ಜವಾಬ್ದಾರರಾಗಿರುತ್ತಾರೆ. ತಪ್ಪಿದಲ್ಲಿ ಈ ನಷ್ಟವನ್ನು ಮೂಲ ಬಿಡ್ಡುದಾರರಿಂದ ಅರಣ್ಯ ಕಾಯ್ದೆ 1969 ಅಧಿನಿಯಮ 109ರ ಪ್ರಕಾರ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು.

4. ಸಂಬಂಧಪಟ್ಟ ಅಧಿಕಾರಿಗಳಿಂದ ಬಿಡ್ಡು ಅಂಗಿಕಾರವಾದ ನಂತರ ಯಶಸ್ವಿ ಬಿಡ್ಡುದಾರರ ಹೆಸರಿಗೆ ನೋಂದಣಿ ಅಂಚೆ/ ಸ್ವೀಕೃತಿ ಪತ್ರದ ಮೂಲಕ ತಿಳಿಸಲಾಗುವುದು. ಈ ತಿಳುವಳಿಕೆಯನ್ನು ಹರಾಜು ನಡೆದ ದಿನದಿಂದ 60 ದಿನಗಳ ಒಳಗಾಗಿ ಯಶಸ್ವಿ ಬಿಡ್ಡುದಾರರಿಗೆ/ ಟೆಂಡರ್‌ದಾರರಿಗೆ ತಿಳಿಸಲಾಗುವುದು. ಯಶಸ್ವಿ ಬಿಡ್ಡುದಾರರು ಟೆಂಡರ್‌ದಾರರು ಉಳಿದ ಮುಕ್ಕಾಲು ಭಾಗ ಹರಾಜಿನ ಮೊತ್ತದ ಹಣವನ್ನು ಸ್ವೀಕೃತಿ ಅರ್ಜಿಯ ಪ್ರತಿ ತಲುಪಿದ 15 ದಿನಗಳ ಒಳಗೆ ಕಟ್ಟಿ ಬೀಟೆ ಮರವನ್ನು ಬಿಡಿಸಿಕೊಳ್ಳುವುದು. ತಪ್ಪಿದಲ್ಲಿ ನಿಬಂಧನೆಯ ಸಂಖ್ಯೆ 3ರ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಾಗುವುದು.

5. ಹರಾಜನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಇರುತ್ತದೆ. ಯಾವುದೇ ಕಾರಣವನ್ನು ನೀಡದೆ ಸಂಬಂಧಿಸಿದ ಅಧಿಕಾರಿಗಳು ಹರಾಜನ್ನು ತಿರಸ್ಕರಿಸಬಹುದಾಗಿರುತ್ತದೆ.

6. ಯಶಸ್ಸಿನ ಬಿಡ್ಡುದಾರರಿಗೆ ತೀವ್ರ ಕಷ್ಟ ಪರಿಸ್ಥಿತಿಯಲ್ಲಿ ಬೀಟೆ ಮರದ ಬಾಕಿ ಮೊತ್ತ ಪಾವತಿಸಲು ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ವೃತ್ತ, ಬೆಂಗಳೂರು ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರು ಬಾಕಿ ಮೊತ್ತ ಅದರ ಮೇಲಿನ ಬಡ್ಡಿ ಹಾಗೂ ನೆಲಬಾಡಿಗೆಯನ್ನು ವಿಧಿಸಿ, ಅವಧಿ ವಿಸ್ತರಣೆ ನೀಡಲು ಅಧಿಕಾರವುಳ್ಳರಾಗಿರುತ್ತಾರೆ.

7. ಸದರಿ ವಾಹನದ ಮೇಲೆ ಬೇರೆ ಯಾವುದೇ ಹಣ ಬಾಕಿ ಇದ್ದಲ್ಲಿ ಸದರಿ ಬಾಕಿ ತೀರುವಳಿ ಜವಾಬ್ದಾರಿ ಬಿಡ್ಡುದಾರರದಾಗಿರುತ್ತದೆ.

8. ಟೆಂಡರ್ ಫಾರಂಗಳನ್ನು ಈ ಕಛೇರಿಯ ವೇಳೆಯಲ್ಲಿ ನಿಗದಿತ ಶುಲ್ಕ ಹತ್ತು ರೂ ಮತ್ತು ಚಾಲ್ತಿಯಲ್ಲಿರುವ ತೆರಿಗೆಗಳನ್ನು ಕಟ್ಟಿ ದಿನಾಂಕ: 16.11.2004ರಿಂದ 18.11.2004ರವರೆಗೆ ಮಧ್ಯಾಹ್ನ 12.00 ಗಂಟೆಯವರೆಗೆ ಪಡೆಯಬಹುದು.

9. ಟೆಂಡರ್‌ಗೆ ಸಂಬಂಧಿಸಿದ ದಾಖಲಾತಿಗಳು ಸೇರಿದಂತೆ ಮೊಹರು ಮಾಡಿದ ಕವರಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರ ಕಛೇರಿಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ: 18.11.2004 ಮಧ್ಯಾಹ್ನ 2.00 ಗಂಟೆಗೆ ಹಾಕುವುದು.

10. ಒಬ್ಬರು ಒಂದು ಟೆಂಡರ್‌ನ್ನು ಮಾತ್ರ ಹಾಕಬಹುದು ಒಂದಕ್ಕಿಂತ ಹೆಚ್ಚು ಟೆಂಡರ್ ಹಾಕಿದಲ್ಲಿ ಹೆಚ್ಚು ಮೊತ್ತವನ್ನು ಒಳಗೊಂಡಿರುವ ಟೆಂಡರ್‌ನ್ನು ಮಾತ್ರ ಪರಿಗಣಿಸಿ ಮಿಕ್ಕ ಟೆಂಡರ್‌ಗಳನ್ನು ತಿರಸ್ಕೃತಗೊಳಿಸಲಾಗುವುದು.

11. ಟೆಂಡರ್ ಕವರಿನ ಮೇಲೆ ಲಾಟ್ ಸಂಖ್ಯೆ ನಮೂದಿಸುವುದು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ನಗರ ವಿಭಾಗ, ಬೆಂಗಳೂರು ರವರ ಹೆಸರಿಗೆ ಟೆಂಡರ್ ಅರ್ಜಿಗಳನ್ನು ಸಲ್ಲಿಸಬೇಕು.

12. ಹರಾಜು ದಿನಾಂಕ: 18.11.2004ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ಬೀಟೆ ಮರಗಳನ್ನು ದಾಸ್ತಾನು ಮಾಡಿರುವ ಸ್ಥಳ ಜಾರಕಬಂಡೆ ಕಾವಲ್, (ಶ್ರೀಗಂಧದ ಉಗ್ರಾಣದ ಮುಂಭಾಗ) ಕಮ್ಮಗೊಂಡನಹಳ್ಳಿ ಪಶ್ಚಿಮ, ಜಾಲಹಳ್ಳಿ, ಬೆಂಗಳೂರು ಇಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಹರಾಜು ನಡೆಸಲಾಗುವುದು.

13. ಈ ಮೇಲಿನ ದಿನಾಂಕದಂದು ಅನಿವಾರ್ಯ ಕಾರಣಗಳಿಂದ ಹರಾಜು ನಿಂತಲ್ಲಿ ದಿನಾಂಕ: 22.11.2004ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ಜಾರಕಬಂಡೆ ಕಾವಲ್, (ಶ್ರೀಗಂಧದ ಉಗ್ರಾಣದ ಮುಂಭಾಗ) ಕಮ್ಮಗೊಂಡನಹಳ್ಳಿ ಪಶ್ಚಿಮ, ಜಾಲಹಳ್ಳಿ, ಬೆಂಗಳೂರು ಇಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಹರಾಜು ನಡೆಸಲಾಗುವುದು.

14. ಟೆಂಡರ್‌ಗಳನ್ನು ಹರಾಜಿನ ನಂತರ ಹಾಜರಿರುವ ಟೆಂಡರ್‌ದಾರರು, ಬಿಡ್ಡುದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

15. ಹರಾಜು ನಡೆಯುವ ದಿನ ಅಥವಾ ಟೆಂಡರ್ ಫಾರಂ ಪಡೆಯಲು ನಿಗದಿ ಪಡಿಸಿರುವ ದಿನಾಂಕದಂದು ಸಾರ್ವತ್ರಿಕ ರಜೆಯಾದ ಪಕ್ಷದಲ್ಲಿ ಸದರಿ ಹರಾಜನ್ನು ಮತ್ತು ಟೆಂಡರ್ ಪಡೆಯುವ ದಿನವನ್ನು ಮುಂದಿನ ಕಛೇರಿಯ ಕೆಲಸದ ದಿನದಂದು ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ನಡೆಸಲಾಗುವುದು.

16. ಟೆಂಡರ್‌ದಾರರು ಒಂದು ಬೀಟೆ ಮರಕ್ಕೆ ಒಂದು ಟೆಂಡರ್ ಫಾರಂ ಮಾತ್ರ ಉಪಯೋಗಿಸತಕ್ಕದ್ದು.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು
ನಗರ ವಿಭಾಗ, ಬೆಂಗಳೂರು.

ಪಿ.ಆರ್.494

ಜಲ ಸಂಪನ್ಮೂಲ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.4, ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ
ಅಲ್ಪಾವಧಿ ಟೆಂಡರ್ ಪ್ರಕಟಣೆ: 2004-05

ಮೊಹರಾದ ಐಟಂವಾರು ಟೆಂಡರ್‌ಗಳನ್ನು ನಿಗದಿತ ನಮೂನೆಯಲ್ಲಿ ದ್ವಿಪ್ರತಿಗಳಲ್ಲಿ ಈ ಕೆಳಕಾಣಿಸಿರುವ ಕಾಮಗಾರಿಗಳಿಗೆ ನೊಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.4 ಬಿ.ಆರ್.ಎಲ್.ಬಿ.ಸಿ. ವಿಭಾಗ ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

ತುಂಬಲಾದ ಟೆಂಡರ್‌ಗಳನ್ನು ದಿನಾಂಕ: 29.11.2004 ಸಂಜೆ 4.00 ಗಂಟೆಗೆ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಹಾಗೂ ಟೆಂಡರ್‌ಗಳನ್ನು ಸಾಧ್ಯವಾದಲ್ಲಿ ಅದೇ ದಿನ ಸಂಜೆ 4.30 ಗಂಟೆಗೆ ಅಥವಾ ಇನ್ನಾವುದೇ ದಿನದಂದು ಕಛೇರಿಯಲ್ಲಿ ಹಾಜರಿರುವ ಟೆಂಡರ್‌ದಾರರ ಅಥವಾ ಇನ್ನಾವುದೇ ನೊಂದಾಯಿತ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

1. ನಿಗದಿತ ಖಾಲಿ ಟೆಂಡರ್ ಫಾರಂಗಳನ್ನು ಕೋರಿ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ:24.11.2004 ಸಂಜೆ 5.30 ರವರೆಗೆ.
2. ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ದಿನಾಂಕ 27.11.2004
3. ತುಂಬಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ 29.11.2004
4. ಕೆಲಸವನ್ನು ಮುಗಿಸುವ ಅವಧಿ ಆರು ತಿಂಗಳು (ಮಳೆಗಾಲವನ್ನು ಹೊರತುಪಡಿಸಿ)
5. ಟೆಂಡರ್‌ಕರೆ ಎರಡನೇ ಕರೆ

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು. ಟೆಂಡರ್‌ನಲ್ಲಿ ಸೂಚಿಸಿರುವ ದಿನಾಂಕಗಳು ರಜಾ ದಿನವೆಂದು ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನವನ್ನು ಟೆಂಡರಿನಲ್ಲಿ ತಿಳಿಸಿದ ದಿನಾಂಕದ ಬದಲಾಗಿ ಪರಿಗಣಿಸಲಾಗುವುದು.

ಕ್ರಮ ಸಂಖ್ಯೆ	ಕೆಲಸದ ಹೆಸರು	ಟೆಂಡರ್‌ಗೆ ಇಡಲಾದ ಮೊತ್ತ	ಇ.ಎಂ.ಡಿ.	ಟೆಂಡರ್ ಫಾರಂ ಬೆಲೆ (ತೆರಿಗೆಗಳು ಪ್ರತ್ಯೇಕ) ಹಿಂದಿರುಗಿಸಲಾಗದ ಮೊತ್ತ	ಗುತ್ತಿಗೆದಾರರ ದರ್ಜೆ
1	2	3	4	5	6
1.	Constructionof Foot bridge across Tunga Left Bank canal at Ch 21.30 km in between Ravindra Nagar and Rajendranagara in Shimoga.	Rs.8,47,746	Rs.16,960	1,000-00	Class II & above
2.	Construction of Bridge across Tunga Left Bank canal at ch 18.20 km near Tippu Nagar in Shimoga City.	Rs. 14,58,796	Rs. 21,890	1,500-00	Class II & above
3.	Construction of bridge across Tunga Left Bank canal at Ch 20.80 km near Laxmi Talkies in Shimoga City.	Rs. 14,87,910	Rs.22,325	1,500-00	Class II & above
4.	Construction of Bridge across Nala to back water of Ambligola Reservoir in between Gouthampura Channapura road in Sagar Taluk.	Rs. 26,27,229	Rs. 26,300	3,000-00	Class I & above

ಸೂಚನೆಗಳು:

1. ನಿಗದಿತ ಟೆಂಡರ್ ಫಾರಂನಲ್ಲಿ ಕಾಮಗಾರಿಯ ವಿವರಗಳನ್ನು ಮತ್ತು ಟೆಂಡರಿನ ಷರತ್ತುಗಳನ್ನು ಒದಗಿಸಲಾಗಿದೆ. ಟೆಂಡರುದಾರರು ಹಾಕುವಾಗ ಪಾಲಿಸಬೇಕಾಗಿರುವ ನಿಬಂಧನೆಗಳನ್ನು ಸಹ ಒದಗಿಸಲಾಗಿದೆ. ಅದರಂತೆ ಟೆಂಡರ್ ಹಾಕಬೇಕು.
2. ಇ.ಎಂ.ಡಿ. ಮೊತ್ತವನ್ನು ಕರ್ನಾಟಕ ಸರ್ಕಾರದ ಟ್ರಜರಿ ಚಲನ್ ಡಿಮ್ಯಾಂಡ್ ಡ್ರಾಫ್ಟ್ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ರೂಪದಲ್ಲಿ ಸೂಚಿಸಿರುವ ಮೊತ್ತಕ್ಕೆ ಕಾರ್ಯಪಾಲಕ ಇಂಜಿನಿಯರ್, ನಂ.4. ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ ಇವರ ಹೆಸರಿನಲ್ಲಿ ಪಾವತಿಸಿರಬೇಕು. ತಪ್ಪಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
3. ಯಾವುದೇ ನಿಬಂಧನೆಗಳನ್ನು ಒಳಗೊಂಡ ಟೆಂಡರ್‌ಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ.
4. ಠೇವಣಿ ಕ್ರಮಬದ್ಧತೆಯು (ವ್ಯಾಲಿಡಿಟಿಪೀರಿಯಡ್) ಒಂದು ನೂರಾ ಇಪ್ಪತ್ತು ದಿನಗಳ ಅವಧಿಯನ್ನು ಒಳಗೊಂಡಿರಬೇಕಾಗಿರುತ್ತದೆ.
5. ಇತ್ತೀಚಿನ ಸೇಲ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
6. ಟೆಂಡರನ್ನು ಯಾವುದೇ ಕಾರಣವಿಲ್ಲದೆ ಮುಂದೂಡುವ, ತಿರಸ್ಕರಿಸುವ ಅಧಿಕಾರವು ಕಾರ್ಯಪಾಲಕ ಅಭಿಯಂತರವರಿಗೆ ಇರುತ್ತದೆ.
7. ಇಲಾಖಾವತಿಯಿಂದ ಯಾವುದೇ ಕಾಮಗಾರಿ ನಿರ್ಮಾಣ ವಸ್ತುಗಳನ್ನು ವಿತರಿಸಲಾಗುವುದಿಲ್ಲ. ಗುತ್ತಿಗೆದಾರರೇ ಸ್ವಂತ ಏರ್ಪಾಟು ಮಾಡಿಕೊಳ್ಳತಕ್ಕದ್ದು.
8. ಜೇಷ್ಠತೆಯ ಆಧಾರದ ಮೇಲೆ ಗುತ್ತಿಗೆದಾರರ ವಿಪತ್ರಗಳನ್ನು ಪಾವತಿಸಲಾಗುವುದು.
9. ಖಾಲಿ ಟೆಂಡರ್ ಪುಸ್ತಕವನ್ನು ಖರೀದಿಸಿ ಕ್ರಮಬದ್ಧವಾಗಿ ಟೆಂಡರ್ ಹಾಕದೇ ಇದ್ದ ಮತ್ತು ಮೂರು ಬಾರಿ ಪುನರಾವರ್ತನೆ ಮಾಡಿದ ಗುತ್ತಿಗೆದಾರರು ಮುಂದಿನ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
10. ಸೇತುವೆ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಿದಂತಹ ಗುತ್ತಿಗೆದಾರರಿಗೆ ಪ್ರಾಮುಖ್ಯತೆ ನೀಡಲಾಗುವುದು.

ಆರ್. ವೈಕುಂಠಯ್ಯ

ಪಿ.ಆರ್.495

ಕಾರ್ಯಪಾಲಕ ಅಭಿಯಂತರು,
ನಂ.4, ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ.

FORM-IV
(See Rule 12)
NOTICE

It is hereby notified that the undersigned has changed her name from **SMT. GIRIJA D/O VEERABHADRAPPA KITTUR to SMT. GIRIJA W/O. ULAVIBASAVESHWAR ANNIGERI.**

PD-161 **SMT. GIRIJA W/O. ULAVIBASAVESHWAR ANNIGERI.**

FORM-IV
(See Rule 12)
NOTICE

It is hereby notified that the undersigned has changed her name from **SMT. LALITA D/O DASHARATHA SHIRKE to SMT. LALITA W/O VILAS GAIKWAD.**

PD-162 **SMT. LALITA W/O VILAS GAIKWAD.**

FORM-IV
(See Rule 12)
NOTICE

It is hereby notified that the undersigned has changed her name from **SMT. ANITA MAHADEVAPPA. GURAPPANAVAR to SMT. ANITA W/O PAVITRA KOPPAD.**

PD-163 **SMT. ANITA W/O PAVITRA KOPPAD**

FORM No.I
(SEE RULE 9)
DEPARTMENT OF JUDICIARY
District Court, Dharwad, Dated: 28th September, 2004
NOTIFICATION

SMT. BASAWWA D/O SHIVAPPA BOMMANASHETTI, First Division Assistant working in Judicial Department/ Prl. Civil Judge (Sr.Dn) and Addl. CJM., Court, Hubli is permitted to change her name to **"SMT. VIJAYALAXMI W/O SHIVAPUTRAPPA TOTIGER".**

Veeranna G. Tigadi
PD-164 Prl. District and Sessions Judge, Dharwad.

FORM No.I
(SEE RULE 9)
DEPARTMENT OF JUDICIARY
District Court, Dharwad, Dated: 28th September, 2004
NOTIFICATION

SMT. PUSHPAVATI NARAYANRAO BETAGERI, Typist working in Judicial Department/ Prl. Civil Judge (Sr.Dn) and Addl. CJM., Court, Hubli is permitted to change her name to **"SMT. SUMAN W/O. GANAPATI YALGI".**

Veeranna G. Tigadi
PD-165 Prl. District and Sessions Judge, Dharwad.

FORM No.I
(SEE RULE 9)
NOTIFICATION

DEVI BILIYA NAIK, Working as Typist in the Office Agricultural Produce Market Committee, Honnavara, is permitted to change her name to **DEVI SITARAM NAIK.**

B.M. PHALAKSHA
PD-166 Deputy Director (Admn.)

FORM-IV
(See Rule 12)
NOTICE

It is hereby notified that the undersigned has changed his name from **ADIVEPPA YAMANAPPA MANG to ADIVEPPA YAMANAPPA METGUDD.**

PD-167 **ADIVEPPA YAMANAPPA METGUDD.**

FORM-IV
(See Rule 12)
NOTICE

It is hereby notified that the undersigned has changed his name from **G. SHARANABASAPPA H. GANGADHARAPPA KATTIMANI to SHARAN. GANGADHAR KATTIMANI.**

PD-168 **SHARAN. GANGADHAR KATTIMANI.**

FORM-IV
(See Rule 12)
NOTICE

It is hereby notified that the undersigned has changed her name from **PRABHAVATI to QUADERBEE ALIAS SALAMA BEGUM.**

PD-169 **QUADERBEE ALIAS SALAMA BEGUM.**

FORM-IV
(See Rule 12)
NOTICE

It is hereby notified that the undersigned has changed his name from **CHANDRAKANT GANAPATI HARIJAN to CHANDRAKANT.**

PD-170 **CHANDRAKANT.**

FORM-IV
(See Rule 12)
NOTICE

It is hereby notified that the undersigned has changed his name from **SRI TAMMANNA BASANNA TALAWAR to TAMMANNA BASANNA HATTALLI.**

PD-171 **TAMMANNA BASANNA HATTALLI.**

FORM-IV
(See Rule 12)
NOTICE

It is hereby notified that the undersigned has changed his name from **KESU DAMU LAMANI to KESU DAMU NAIK.**

PD-173 **KESU DAMU NAIK.**

FORM-IV
(See Rule 12)
NOTICE

It is hereby notified that the undersigned has changed her name from **HABIBA BEGUM HASANUDDIN SHAIKH to SHWETA VIJAYKUMAR KALASAPUR.**

PD-174 **SHWETA VIJAYKUMAR KALASAPUR.**

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೋಲಾರ ವಿಭಾಗ, ಕೋಲಾರ
ಟೆಂಡರ್ ಹರಾಜು ಸಂಕ್ಷಿಪ್ತ ಮಾರಾಟ ಪ್ರಕಟಣೆ
ಸಂಖ್ಯೆ: ಎ7:ಎಸ್‌ಎಎಸ್: ಅಮರಾಯಿ:ವಿವ: 43: 2004-05, ದಿನಾಂಕ: 25ನೇ ಸೆಪ್ಟೆಂಬರ್, 2004

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋಲಾರ ಅರಣ್ಯ ವಿಭಾಗದ ಎಲ್ಲಾ ತಾಲ್ಲೂಕುಗಳಲ್ಲಿರುವ ಅಮರಾಯಿ ಫಸಲನ್ನು (ಹುಣಸೇ, ಮಾವು, ಹೊಂಗೆ) ಹೋಬಳಿವಾರು 2004-05ನೇ ಸಾಲಿಗೆ ಸಂಗ್ರಹಿಸಿ ತೆಗೆಯಲು ಒಂದು ವರ್ಷದ ಅವಧಿಗೆ (ದಿನಾಂಕ: 01.07.2004 ಅಥವಾ ದೃಢೀಕರಿಸಿದ ದಿನಾಂಕದಿಂದ 30.06.2005ರವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ಅಥವಾ ಅವರಿಂದ ನೇಮಿಸಲ್ಪಟ್ಟ ಇತರೆ ಅಧಿಕಾರಿಗಳಿಂದ ದಿನಾಂಕ:23.11.2004 ಅಪರಾಹ್ನ 2.00 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಪ್ರಾದೇಶಿಕ ವಿಭಾಗ, ಗಾಜಲದಿನ್ನೆ, ಕಮಲ ನೆಹರು ಸ್ಯಾನಿಟೋರಿಯಂ ಆಸ್ಪತ್ರೆ ಅಂಚೆ, ಬಂಗಾರಪೇಟೆ ರಸ್ತೆ, ಕೋಲಾರ ಇಲ್ಲಿ ಈ ಕೆಳಗೆ ನಮೂದಿಸಿರುವ ಷರತ್ತುಗಳೊಂದಿಗೆ ಟೆಂಡರ್ ಮತ್ತು ಹರಾಜು ಮೂಲಕ ವಿಲೇ ಮಾಡಲಾಗುವುದು. ಅದೇ ದಿನ ಹರಾಜು ಮಾರಾಟ ಮುಗಿದ ನಂತರ ಟೆಂಡರ್‌ನ್ನು ತೆಗೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಹೋಬಳಿವಾರು ಗುತ್ತಿಗೆ ಮಾರಾಟ ಮಾಡುವ ಅಮರಾಯಿ ಫಸಲು

ತಾಲ್ಲೂಕು		ಹೋಬಳಿ	
1.	ಬಾಗೇಪಲ್ಲಿ ತಾಲ್ಲೂಕು	1.	ಮಿಟ್ಟೇಮರಿ
		2.	ಪಾತಪಾಳ್ಯ
		3.	ಬಾಗೇಪಲ್ಲಿ ಕಸಬಾ ಹೋಬಳಿ
		4.	ಚೇಳೂರು ಹೋಬಳಿ
		5.	ಗೂಳೂರು ಹೋಬಳಿ
2.	ಗುಡಿಬಂಡೆ ತಾಲ್ಲೂಕು	6.	ಗುಡಿಬಂಡೆ ಕಸಬಾ ಹೋಬಳಿ
		7.	ಸೋಮೇನಹಳ್ಳಿ ಹೋಬಳಿ
3.	ಗೌರಿಬಿದನೂರು ತಾಲ್ಲೂಕು	8.	ಗೌರಿಬಿದನೂರು ಕಸಬಾ ಹೋಬಳಿ
		9.	ನಗರಗೆರೆ ಹೋಬಳಿ
		10.	ಡಿ. ಪಾಳ್ಯ ಹೋಬಳಿ
		11.	ತೊಂಡೇಬಾವಿ ಹೋಬಳಿ
		12.	ಹೊಸೂರು ಹೋಬಳಿ
		13.	ಮಂಚೇನಹಳ್ಳಿ
4.	ಚಿಕ್ಕಬಳ್ಳಾಪುರ ತಾಲ್ಲೂಕು	14.	ಮಂಡಿಕಲ್ ಹೋಬಳಿ
		15.	ಚಿಕ್ಕಬಳ್ಳಾಪುರ ಕಸಬಾ
		16.	ನಂದಿ ಹೋಬಳಿ
5.	ಶಿಡ್ಲಘಟ್ಟ ತಾಲ್ಲೂಕು	17.	ಬಸೆಟ್ಟಿಹಳ್ಳಿ ಹೋಬಳಿ
		18.	ಜಂಗಮಕೋಟೆ ಹೋಬಳಿ
		19.	ಶಿಡ್ಲಘಟ್ಟ ಕಸಬಾ ಹೋಬಳಿ
		20.	ಸಾದಲಿ ಹೋಬಳಿ

ತಾಲ್ಲೂಕು		ಹೋಬಳಿ	
6.	ಚಿಂತಾಮಣಿ ತಾಲ್ಲೂಕು	21.	ಕೈವಾರ ಹೋಬಳಿ
		22.	ಚಿಂತಾಮಣಿ ಕಸಬಾ ಹೋಬಳಿ
		23.	ಅಂಬಾಜಿದುರ್ಗ ಹೋಬಳಿ
		24.	ಮುಂಗಾನಹಳ್ಳಿ ಹೋಬಳಿ
		25.	ಚಿಲಕಲನೇರ್ಪು ಹೋಬಳಿ
		26.	ಮುರಗಮಲ್ಲಾ ಹೋಬಳಿ
7.	ಶ್ರೀನಿವಾಸಪುರ ತಾಲ್ಲೂಕು	27.	ರಾಯಲ್ಪಾಡು ಹೋಬಳಿ
		28.	ಶ್ರೀನಿವಾಸಪುರ ಕಸಬಾ ಹೋಬಳಿ
		29.	ರೋಣೂರು ಹೋಬಳಿ
		30.	ನೆಲವಂಕಿ ಹೋಬಳಿ
		31.	ಯಲ್ದೂರು ಹೋಬಳಿ
8.	ಮಾಲೂರು ತಾಲ್ಲೂಕು	32.	ಮಾಸ್ತಿ ಹೋಬಳಿ
		33.	ಲಕ್ಕೂರು ಹೋಬಳಿ
		34.	ಟೇಕಲ್ ಹೋಬಳಿ
		35.	ಮಾಲೂರು ಕಸಬಾ ಹೋಬಳಿ
9.	ಕೋಲಾರ ತಾಲ್ಲೂಕು	36.	ಕೋಲಾರ ಕಸಬಾ ಹೋಬಳಿ
		37.	ವಕ್ಕಲೇರಿ ಹೋಬಳಿ
		38.	ವೇಮಗಲ್ ಹೋಬಳಿ
		39.	ಹುತ್ತೂರು ಹೋಬಳಿ
		40.	ನರಸಾಪುರ ಹೋಬಳಿ
		41.	ಹೊಳೂರು ಹೋಬಳಿ
		42.	ಸುಗಟೂರು ಹೋಬಳಿ
10.	ಬಂಗಾರಪೇಟೆ ತಾಲ್ಲೂಕು	43.	ಬಂಗಾರಪೇಟೆ ಕಸಬಾ ಹೋಬಳಿ
		44.	ಬೂದಿಕೋಟೆ ಹೋಬಳಿ
		45.	ಕಾಮಸಂದ್ರ ಹೋಬಳಿ
		46.	ರಾಬರ್ಟ್‌ಸನ್ ಪೇಟೆ ಹೋಬಳಿ
		47.	ಬೇತಮಂಗಲ ಹೋಬಳಿ
		48.	ಕ್ಯಾಸಂಬಳ್ಳಿ ಹೋಬಳಿ
11.	ಮುಳಬಾಗಿಲು ತಾಲ್ಲೂಕು	49.	ಮುಳಬಾಗಿಲು ಕಸಬಾ ಹೋಬಳಿ
		50.	ಆವಣಿ ಹೋಬಳಿ
		51.	ದುಗ್ಗಸಂದ್ರ ಹೋಬಳಿ
		52.	ತಾಯಲೂರು ಹೋಬಳಿ
		53.	ಬೈರಕೂರು ಹೋಬಳಿ

ಷರತ್ತುಗಳು

1. ಟೆಂಡರ್ ಫಾರಂ ಜೊತೆ ಇ.ಎಂ.ಡಿ.ಯನ್ನು ಪ್ರತಿ ಘಟಕಕ್ಕೆ ರೂ. 1000-00 ರಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ರವರ ಪರ ತೆಗೆದು ಸಲ್ಲಿಸಬೇಕು.
2. ಟೆಂಡರ್ ಫಾರಂಗಳನ್ನು ದಿನಾಂಕ: 20.11.2004 ಮತ್ತು 22.11.2004ರಂದು ಕೆಲಸದ ವೇಳೆಯಲ್ಲಿ ಕೊಡಲಾಗುವುದು. ಒಂದು ಟೆಂಡರ್ ಫಾರಂ ಬೆಲೆ ರೂ. 200-00.
3. ಮೇಲ್ಕಂಡ ಮಾರಾಟದ ಒಪ್ಪಿಗೆ ಮತ್ತು ನಿರಾಕರಿಸುವುದು ಅರಣ್ಯ ಇಲಾಖಾ ಪ್ರಾಧಿಕಾರವುಳ್ಳ ಅಧಿಕಾರಿಗಳವರ ವ್ಯಾಪ್ತಿಯಲ್ಲಿರುತ್ತದೆ.
4. ನ್ಯಾಯಾಲಯದ ರೂ. 2-00 ಸ್ಟಾಂಪನ್ನು ಟೆಂಡರ್‌ನೊಂದಿಗೆ ಲಗತ್ತಿಸಬೇಕು. ಮೊಹರಾದ ಟೆಂಡರ್ ನಮೂನೆಗಳನ್ನು ದಿನಾಂಕ: 23.11.2004ರಂದು ಮಧ್ಯಾಹ್ನ 1-00 ಗಂಟೆಯವರೆಗೆ ಸಲ್ಲಿಸಬಹುದು.
5. ಹರಾಜು ನಡೆದ ದಿನ ಹರಾಜಿನ ಪೂರ್ಣ ಮೊತ್ತ ಮತ್ತು ಎಲ್ಲಾ ತೆರಿಗೆಗಳನ್ನು ಪೂರ್ಣವಾಗಿ ಮಾರಾಟ ಮುಗಿದ ತಕ್ಷಣ ಪಾವತಿಸಬೇಕು. (ಅರಣ್ಯಾಭಿವೃದ್ಧಿ ತೆರಿಗೆ- ಶೇ.8 ಮತ್ತು ಆದಾಯ ತೆರಿಗೆ ಶೇ.15 ಆದಾಯ ತೆರಿಗೆ ಮೇಲೆ ಸರ್‌ಚಾರ್ಜ್ ಶೇ.5).
6. ಬ್ಲಾಕ್ ಲಿಸ್ಟ್ ಆಗಿರುವವರು, ಇನ್‌ಸಾಲ್‌ವೆಂಟ್ಸ್, ಡಿಫಾಲ್ಟರ್ಸ್ ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಬಿಡ್‌ನಲ್ಲಿ ಭಾಗವಹಿಸುವುದಕ್ಕಾಗಲಿ ಅರ್ಹರಲ್ಲ.
7. ಭೂಕಂದಾಯ ನಿಯಮ 1966ರ ಕಂಡಿಕೆ 98ರ ಪ್ರಕಾರ ಸರ್ಕಾರಿ ಜಮೀನುಗಳಲ್ಲಿರುವ ಎಲ್ಲಾ ಮರಗಳ ಅಮರಾಯಿ ಫಸಲನ್ನು ಹರಾಜು ಮಾಡಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ.
8. ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸುವ ಮೊದಲೇ ಅವರಿಗೆ ಬೇಕಾದ ಹೋಬಳಿಗಳ ಅಮರಾಯಿ ಫಸಲನ್ನು ಖುದ್ದಾಗಿ ನೋಡಿ ಪರಿಶೀಲಿಸಿದ ನಂತರ ಹರಾಜಿನಲ್ಲಿ ಭಾಗವಹಿಸಿ ದರ ನೀಡುವುದು. ಒಂದು ವೇಳೆ ಮರಗಳ ಫಸಲು ವೀಕ್ಷಿಸದೇ ದರ ನೀಡಿ ನಂತರ ಮರಗಳಲ್ಲಿ ಫಸಲು ಇಲ್ಲ ಮಾಫಿ ಮಾಡಿ ಅಥವಾ ಕಡಿಮೆ ದರ ಒಪ್ಪಿಕೊಳ್ಳುವಂತೆ ಕೋರಿದಲ್ಲಿ ಈ ಕಛೇರಿ ಅಂತಹ ಅಹವಾಲುಗಳನ್ನು ಪರಿಗಣಿಸುವುದಿಲ್ಲ ಹಾಗೂ ಅದಕ್ಕೆ ಜವಾಬ್ದಾರವಾಗುವುದಿಲ್ಲ.
9. ಉಳಿದ ವಿವರಗಳು ಮತ್ತು ಷರತ್ತುಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ರವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೋಲಾರ ವಿಭಾಗ, ಕೋಲಾರ.

ಪಿ.ಆರ್.497